MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

YUVA MARGA KANNADA DAILY NEWS PAPER

ಸಂಪುಟ: 04 | ಸಂಚಿಕೆ: 306 | ಮಂಗಳವಾರ : 23-09-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 306 | TUESDAY : 23-09-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

## ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರ ಕಾರ್ಮಿಕರಿಗೆ ವಿವಿಧ ಕ್ರೀಡೆಗಳ ಆಯೋಜನೆ

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.22–** ಪಟ್ಟಣದ ಬಾಷುಮಿಯ ಸರ್ಕಾರಿ ಪದವಿ ಕಾಲೇಜ್ ಕ್ರೀಡಾಂಗಣದಲ್ಲಿ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸೇವಾ ಸಂಘದ ತಾಲೂಕು ಘಟಕದ ವತಿಯಿಂದ ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಪುರಸಭೆ ಪೌರಕಾರ್ಮಿಕರಿಗಾಗಿ ನಡೆದ ವಿವಿಧ ಕ್ರೀಡೆಗಳಿಗೆ ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ ಚಾಲನೆ ನೀಡಿ ಮಾತನಾಡಿ ಮಾನ್ವಿ ನಗರವನ್ನು ಸ್ವಚ್ಚಮತ್ತು ಸುಂದರಾಗಿಡುವಲ್ಲಿ ಪುರಸಭೆಯ ಪೌರಕಾರ್ಮಿಕರ ಕೊಡುಗೆ ಹೆಚ್ಚಿನದಾಗಿದ್ದು ಪೌರಕಾರ್ಮಿಕರಿಗೂ ಕೂಡ ನಿತ್ಯದ ಕೇಲಸದ ನಡುವೆಯು ಅವರಿಗೂ ಕೂಡ ಮನಸ್ಸಿಗೆ ಸಂತೋಷ ನೀಡುವುದಕ್ಕಾಗಿ ಕ್ರೀಡೆಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರಿಗೆ ಹಗ್ಗ ಎಳೆಯುವ ಸ್ಪರ್ಧೆ ಸೇರಿದಂತೆ ವಿವಿಧ ಕ್ರೀಡೆಗಳನ್ನು ಅಯೋಜಿಸಲಾಗಿತ್ತು ಪುರಸಭೆಯ ಮಹಿಳಾ ಮತ್ತು ಪುರುಷ ನೌಕರರು ಉತ್ಸಾಹದಿಂದ ಭಾಗವಹಿಸಿದರು.

ಹಿರಿಯ ಪುರಸಭೆ ಸದಸ್ಯರಾದ ರಾಜಾ ಮಹೇಂದ್ರನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಸುಖಮುನಿ, ವೆಂಕಟೇಶ ನಾಯಕ,ಬಾಷಸಾಬ್, ಕರ್ನಾಟಕ ರಾಜ್ಯ ಪೌರ ಸೇವಾ ನೌಕರರ ಸೇವಾ ಸಂಘದ ತಾಲೂಕು ಘಟಕದ ಅಧ್ಯಕ್ಷರಾದ ಹನು ಮಂತಪ್ಪ, ಗೌರವಾಧ್ಯಕ್ಷರಾದ ಮಹೇಶ್ ಕುಮಾರ್, ಸೇರಿದಂತೆ ಪುರಸಭೆ ಸಿಬ್ಬಂದಿ ಗಳು ಹಾಗೂ ಪೌರಕಾರ್ಮಿಕರು ಭಾಗವಹಿಸಿದ್ದರು.

## ಜಾತಿ ಸಮೀಕ್ಷೆಯಲ್ಲಿ ಗೊಂದಲ ಸೃಷ್ಠಿ: ಶಾಸಕ ವಜ್ಜಲ್

ಯುವ ಮಾರ್ಗ ಸುದ್ದಿ




**ಲಿಂಗಸುಗೂರು,ಸೆ.22–**ರಾಜ್ಯ ಸರಕಾರ ಮಾಡಲು ಹೊರಟಿರುವ ಜಾತಿ ಸಮೀಕ್ಷೆ ಕಾರ್ಯ ಅವೈಜ್ಞಾನಿಕವಾಗಿದ್ದು, ಇದು ಹಿಂದುಗಳನ್ನು ಒಕ್ಕಲೆಬ್ಬಿಸುವ ಗೊಂದಲ ಸೃಷ್ಟಿಸುವ ಕೆಲಸವಾಗಿದೆ ಎಂದು ಶಾಸಕ ಮಾನಪ್ಪ ವಜ್ಜಲ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ನ್ಯಾ.ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ 150 ಕೋಟಿ ರೂಪಾಯಿ ವ್ಯಯಿಸಿ ವರದಿಯನ್ನು ಸಿದ್ದಪಡಿಸಲಾಗಿದೆ. ಅದರಲ್ಲಿ ಸರಕಾರ ನೂರಾರು ಉಪ ಜಾತಿಗಳನ್ನು ಸೃಷ್ಟಿಸಿ ಪರಿಶಿಷ್ಟ ಜಾತಿಯವರಿಗೆ ಅನ್ಯಾಯ ಮಾಡುವ ಕೆಲಸ ಖಂಡನೀಯ. ಅಲ್ಲದೇ ತಮಗೆ ಬೇಕಾದಂತೆ ಹಿಂದುಳಿದ ವರ್ಗದ ಜಾತಿಗಳಿಗೆ ಆದಿ ಆಂದ್ರ ಕ್ರಿಶ್ಚಿಯನ್, ಬುಡಗ ಜನಾಂಗ ಕ್ರಿಶ್ಚಿಯನ್, ಮಾದಿಗ ಕ್ರಿಶ್ಚಿಯನ್, ಮಹಾರ್ ಕ್ರಿಶ್ಚಿಯನ್, ಆದಿ ಕರ್ನಾಟಕ ಕ್ರಿಶ್ಚಿಯನ್, ಹೊಲೆಯ ಕ್ರಿಶ್ಚಿಯನ್, ಕೊರವ ಕ್ರಿಶ್ಚಿಯನ್, ವಡ್ಡ ಕ್ರಿಶ್ಚಿಯನ್, ವಾಲ್ಮೀಕಿ ಕ್ರಿಶ್ಚಿಯನ್ ಸೇರಿ ನೂರಾರು ಉಪಜಾತಿಗಳನ್ನು ಸೃಷ್ಟಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಬಾಬಾ ಸಾಹೇಬರ ತತ್ವಗಳಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿರುವುದು ರಾಜ್ಯಕ್ಕೆ ದೊಡ್ಡ ಗಂಡಾಂತರವಾಗಿದೆ. ಜಾತಿ ಜಾತಿಗಳ ಮಧ್ಯೆ ದ್ವೇಶ ಭಾವನೆ ಬಿತ್ತುವ ಕೆಲಸ ಕೈಬಿಟ್ಟು ಅಭಿವೃದ್ಧಿಗೆ ಆಧ್ಯತೆ ನೀಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಕೆ.ನಾಗಭೂಷಣ್, ಮುಖಂಡರಾದ ಗಿರಿಮಲ್ಲನಗೌಡ ಪಾಟೀಲ್, ಜ್ಯೂಲೆಪ್ಪ ನಾಯ್ಕ, ನಾರಾಯಣಪ್ಪ, ಭೀಮಣ್ಣ ಹಿರೇಮನಿ, ಲಿಂಗಣ್ಣದೇವಿಕೇರಿ, ರಾಜು ರಾಠೋಡ್ ಸೇರಿ ಇತರರು ಇದ್ದರು.

## ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಗಣತಿದಾರರಿಗೆ ತರಬೇತಿ




ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.22–**ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಯಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಸಂಬಂಧಿಸಿದಂತೆ ಮಾನ್ವಿ ಪಟ್ಟಣದ ಸರ್ಕಾರಿ ಬಾಲಕರ ಪ್ರೌಢಶಾಲೆಯಲ್ಲಿ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ತಹಸೀಲ್ದಾರ್ ಭೀಮರಾಯ್ ಬಿ. ರಾಮಸಮುದ್ರ ಅವರು ಗಣತಿದಾರರಿಗೆ ತರಬೇತಿ ನೀಡಿ, ಅಗತ್ಯ ಕಿಟ್‌ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತಹಸೀಲ್ದಾರ್ ಭೀಮರಾಯ್, ಮಾನ್ವಿ ತಾಲ್ಲೂಕಿನಲ್ಲಿ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 7 ರವರೆಗೆ ಸಮೀಕ್ಷೆ ನಡೆಯಲಿದೆ. ತಾಲ್ಲೂಕಿನ 30 ಸಾವಿರಕ್ಕೂ ಹೆಚ್ಚು ಮನೆಗಳಿಗೆ ಈಗಾಗಲೇ ಜೆಸ್ಕಾಂ ಇಲಾಖೆ ಮೂಲಕ ಯು.ಐ.ಡಿ. ಸಂಖ್ಯೆ ಇರುವ ಚೀಟಿಗಳನ್ನು ಅಂಟಿಸಲಾಗಿದೆ ಎಂದರು.

ಸಮೀಕ್ಷೆಗಾಗಿ ಒಟ್ಟು 310 ಗಣತಿದಾರರನ್ನು ನೇಮಕ ಮಾಡಲಾಗಿದೆ. ಇದರಲ್ಲಿ 275 ಗಣತಿದಾರರು ಪ್ರಮುಖರಾಗಿದ್ದರೆ, 35 ಮಂದಿಯನ್ನು ಕಾಯ್ದಿರಿಸಲಾಗಿದೆ. ಅಲ್ಲದೆ, ಪ್ರತಿ 20 ಗಣತಿದಾರರಿಗೆ ಒಬ್ಬರಂತೆ, ಒಟ್ಟು 30 ಸೂಪರ್‌ವೈಸರ್‌ಗಳನ್ನು ನೇಮಿಸಲಾಗಿದೆ. ಪ್ರತಿ ಕುಟುಂಬಕ್ಕೆ 66 ಪ್ರಶ್ನೆಗಳಿರುವ ಪಟ್ಟಿಯನ್ನು ನೀಡಲಾಗಿದ್ದು, ಗಣತಿದಾರರು ಆಪ್ ಮೂಲಕ ಮಾಹಿತಿ ಸಂಗ್ರಹಿಸಿ, ಕುಟುಂಬದ ಒಪ್ಪಿಗೆ ಪಡೆಯುವುದು ಕಡ್ಡಾಯ ಎಂದು ತಿಳಿಸಿದರು.

ತಾಲ್ಲೂಕು ಆಡಳಿತವು ಸಮೀಕ್ಷೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಂಡಿದೆ ಎಂದು ಅವರು ಹೇಳಿದರು.**(2ನೇಪುಟಕ್ಕೆ)**

## ಸಮೀಕ್ಷೆಯಲ್ಲಿ ಜಾತಿ ಈಡಿಗ ಎಂದು ಬರೆಯಿಸಿ : ವೆಂಕಟೇಶಪ್ಪ ಗುತ್ತೆದಾರ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಸೆ.22–** ಕರ್ನಾಟಕ ರಾಜ್ಯ ಸರ್ಕಾರವು ಜಾತಿ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಜಾತಿ ಕಾಲಂ ನಲ್ಲಿ ಈಡಿಗ ಎಂದು ಬರೆಯಿಸಿ ಎಂದು ಲಿಂಗಸೂಗೂರು ತಾಲೂಕು ಆಯ9 ಈಡಿಗ ಸಂಘದ ಅಧ್ಯಕ್ಷ ವೆಂಕಟೇಶಪ್ಪ ಗುತ್ತೇದಾರ ಮನವಿ ಮಾಡಿದ್ದಾರೆ.

ದಿನಾಂಕ :22-09-2025 ರಿಂದ ಮನೆಯ ಬಾಗಿಲಿಗೆ ಸಮಿಕ್ಷಣಾದಾರರು ಬಂದಾಗ 60 ಪ್ರಶ್ನಾವಳಿಯ ಡಿಜಿಟೆಲ್ ಸಮಿಕ್ಷೆ ಇದ್ದು .ಅದರಲ್ಲಿ ಕೆಳಗಿನ ಕಾಲಂನಲ್ಲಿ ಇರುವಂತೆ ಉತ್ತರಸಿರಿ ಮನೆಯ ಪ್ರತಿ ಸದಸ್ಯರು ಆದರ ಕಾರ್ಡ ಲಿಂಕ್ ಹೊಂದಿದ ಫೋನ್ ನಂಬರನ್ನು ಚಾಲ್ತಿಯಲ್ಲಿ ಇರಿಸಿ.ಸಮಿಕ್ಷೆ ಸಮಯದಲ್ಲಿ ಆಧಾರ ಲಿಂಕ್ ಫೋನ್ ಸಂಖ್ಯೆಗೆ ಔಖಿಕ ಬರತ್ತದೆ ಆ ಸಂಖ್ಯೆಯನ್ನು ಸಮೀಕ್ಷಣಾಕಾರರಗೆ ತಿಳಿಸಬೇಕು. ಮತ್ತು ಕಾಲ0 ನಂ 8 ರಲ್ಲಿ ಧರ್ಮದ ಕಾಲಂ ನಲ್ಲಿ "ಹಿಂದು " ಕಾಲಂ 9 ರಲ್ಲಿ ಜಾತಿ – "ಈಡಿಗ" ಕಾಲಂ 10 ರಲ್ಲಿ ಉಪ ಜಾತಿ – "ಇಳಿಗ / ಇಳಿಗೇರ್ " ಎಂದು ನಿಮ್ಮ ಉಪಜಾತಿಯನ್ನು ನಮೂದಿಸಿ ಸರಿಯಾದ ಮಾಹಿತಿಯನ್ನು ನಿಡಿ ಮುಂದಿನ ಮಕ್ಕಳ ಭವಿಷ್ಯಕ್ಕೆ ಕೈ ಜೋಡಿಸಬೇಕಾಗಿ ತಾಲೂಕ ಈಡಿಗ ಸಂಘದ ಅಧ್ಯಕ್ಷ ವೆಂಕಟೇಶಪ್ಪ ಗುತ್ತೇದಾರ, ಉಪಾಧ್ಯಕ್ಷ ರಾಮಯ್ಯ ಗುತ್ತೇದಾರ, ಕಾರ್ಯದರ್ಶಿ ಬಸವರಾಜ ಗುತ್ತೇದಾರ, ಸಹ ಕಾರ್ಯದರ್ಶಿ ಶಿವಯ್ಯ ಗುತ್ತೇದಾರ ಹೊನ್ನಳ್ಳಿ ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

## ಮಕ್ಕಳು ಆರೋಗ್ಯವಾಗಿದ್ದಲ್ಲಿ ಮಾತ್ರ ಉತ್ತಮ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆಯಾಗುತ್ತದೆ



ಯುವ ಮಾರ್ಗ ಸುದ್ದಿ

**ಮಾನ್ವಿ,ಸೆ.22–** ತಾಲೂಕಿನ ಹರವಿ ಬಸವೇಶ್ವರ ಕಲ್ಯಾಣ ಮಂಟಪ್ಪದಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ಮಾನ್ವಿ ಹಾಗೂ ತಾಲೂಕಾ ನ್ಯಾಯವಾದಿಗಳ ಸಂಘ , ಶಿಶು ಅಭಿವೃದ್ದಿ ಯೋಜನೆ ಇಲಾಖೆ ಮಾನ್ವಿ ಮತ್ತು ಸಿರವಾರ ಸಂಯುಕ್ತಾಶ್ರಯದಲ್ಲಿ ನಡೆದ ಪೌಷ್ಠಿಕ ಆಹಾರ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮವನ್ನು ಉದ್ಘಾಟಿಸಿ ಹಿರಿಯ ಸಿವಿಲ್ ನ್ಯಾಯಧೀಶರಾದ ಶಿವರಾಜ ವಿ.ಸಿದ್ದೇಶ್ವರ ಮಾತನಾಡಿ ಸಾರ್ವಜನಿಕರಿಗೆ ಪೌಷ್ಠಿಕ ಆಹಾರದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು ಮಹಿಳೆಯರು ಹಾಗೂ ಮಕ್ಕಳು ಪೌಷ್ಠಿಕ ಆಹಾರವನ್ನು ಸೇವಿಸದೆ ಹೋದರೆ ಅನೇಕ ಆರೋಗ್ಯ ಸಮಸ್ಯೆಗಳು ಬರುತ್ತವೆ ಆಪೌಷ್ಠಿಕತೆ ಉಂಟಾಗುತ್ತದೆ ಅದ್ದರಿಂದ ಪಾಲಕರು ತಮ್ಮ ಮಕ್ಕಳಿಗೆ ಹೆಚ್ಚಾಗಿ ಹಾಲು, ಹಣ್ಣು,ತರಕಾರಿ,ಶುದ್ದ ನೀರು, ಬೆಳೆಕಾಳುಗಳು ಸೇರಿದಂತೆ ಆಹಾರವನ್ನು ನೀಡಬೇಕು ಮಕ್ಕಳು ಆರೋಗ್ಯವಾಗಿದ್ದಲ್ಲಿ ಮಾತ್ರ ಉತ್ತಮ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆಯಾಗುತ್ತದೆ ಎಂದು ತಿಳಿಸಿದರು.

ಕಲ್ಲೂರಿನ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಸಂಗಮೇಶ ಪೌಷ್ಠಿಕ ಆಹಾರ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳು ತಮ್ಮ ಮನೆಯಲ್ಲಿ ದೊರೆಯುವ ವಿವಿಧ ಅಹಾರ ಪದರ್ಥಗಳ್ಳು ಬಳಸಿಕೊಂಡು ಪೌಷ್ಠಿಕ ಆಹಾರವನ್ನು ತಯಾರಿಸಿಕೊಳ್ಳುವುದರ ಕುರಿತು ಮಾನ್ವಿ ಶಿಶುಅಭಿವೃದ್ದಿ**(2ನೇಪುಟಕ್ಕೆ)**

## ದಸರಾ ಅಂಗವಾಗಿ ಕಲ್ಮಠದಲ್ಲಿ ಮಹಾಚಂಡಿಕಾ ಯಾಗ

ಯುವ ಮಾರ್ಗ ಸುದ್ದಿ



**ಮಾನ್ವಿ,ಸೆ.22–**ಪಟ್ಟಣದ ಮುಕ್ತಾಗುಚ್ಚ ಬೃಹನ್ಮಠದಲ್ಲಿ ಸುವರ್ಣ ದಸರಾ ಮಹೋತ್ಸವಕ್ಕೆ ಕಲ್ಮಠದ ಶ್ರೀ ವಿರೂಪಾಕ್ಷಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿ ಆರ್ಶೀವಚಾನ ನೀಡಿ ದಸರಾ ಹಬ್ಬದ ನವರಾತ್ರಿಗಳಲ್ಲಿ ನವದುರ್ಗೆಯರಿಗೆ ಪೂಜೆ ಸಲ್ಲಿಸಿ ಮಹಾಚಂಡಿಕಾ ಯಾಗವನ್ನು ಮಾಡುವುದರಿಂದ ದುಷ್ಟ ಶಕ್ತಿಗಳ ನಿಗ್ರಹವಾಗಿ ಶ್ರೀದೇವಿಯ ಕೃಪೆ ದೊರೆತು ಲೋಕಕಲ್ಯಾಣವಾಗುತ್ತದೆ, ಚಂಡಿಕಯಾಗದಲ್ಲಿ ಭಾಗವಹಿಸು ವುದರಿಂದ ಶತ್ರು ನಿವಾರಣೆಯಾಗಿ ಮಾನ ಸಿಕ ನೆಮ್ಮದಿ ದೊರೆಯುತ್ತದೆ. ಪುಣ್ಯಫಲ ದೊರೆಯುತ್ತದೆ ಎಂದು ತಿಳಿಸಿದರು.

ದಸರಾ ಹಬ್ಬದ ಅಂಗವಾಗಿ ಶ್ರೀಮಠದಲ್ಲಿನ ಲಿಂ. ಶ್ರೀ ವಿರೂಪಾಕ್ಷ ಶಿವಾಚಾರ್ಯ ಮಹಾಸ್ವಾಮಿಗಳವರ ಹಾಗೂ ಲಿಂ.ಶ್ರೀ ಶಿವಮೂರ್ತಿ ಶಿವಚಾರ್ಯ ಮಹಾಸ್ವಾಮಿಗಳ ಕತೃ ಗದ್ದುಗೆಗೆ ರುದ್ರಾಭಿಷೇಕ ಹಾಗೂ ಮಹಾಮಂಗಳಾ ರತಿ, ಗೋಪೂಜೆ,ಪರಿವಾರ ದೇವತೆಗಳ ಕಳಶ ರಾಧನೆ ನೆರವೇರಿಸಲಾಯಿತು. ಬಾಲ ಮುತ್ತೈದೆಯರಿಗೆ ಪಾದಪೂಜೆ ಹಾಗೂ ರಜತ ಶ್ರೀದೇವಿಯ ಮೂರ್ತಿಗೆ ಸುಮಂಗಲಿಯರಿಂದ ಪೂಜೆಸಲ್ಲಿಸಲಾಯಿತು. ನೀಲಗಲ್ ಸಂಸ್ಥಾನ ಬೃಹನ್ಮಠದ ಶ್ರೀ ರೇಣುಕಶಾಂತಮಲ್ಲ ಶಿವಾಚಾರ್ಯ ಮಹಾಸ್ವಾಮಿಗಳು ಆರ್ಶೀವಾಚನ ನೀಡಿದರು.

ರಾಯಚೂರು ಸೋಮವಾರಪೇಟೆ ಹಿರೇಮಠದ ಶ್ರೀ ಶಿವಯ್ಯಶಾಸ್ತ್ರಿಗಳ ನೇತೃತ್ವದಲ್ಲಿ ಮಹಾಚಂಡಿಕಾಯಾಗ ನಡೆಯಿತು.

## ರಾಯಚೂರು ಗ್ರಾಮೀಣ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ: ಬಸನಗೌಡ ದದ್ದಲ್

ಯುವ ಮಾರ್ಗ ಸುದ್ದಿ



**ರಾಯಚೂರು,ಸೆ.22–** ರಾಯಚೂರು ಗ್ರಾಮೀಣ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ತಮ್ಮ ಗುರಿಯಾಗಿದ್ದು, ಈ ದಿಶೆಯಲ್ಲಿ ನಾನಾ ಯೋಜನೆಗಳ ಸಮರ್ಪಕ ಜಾರಿಗೆ ಒತ್ತು ಕೊಡಲಾಗಿದೆ ಎಂದು ಮಹರ್ಷಿ ವಾಲ್ಮೀಕಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ದಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಹೇಳಿದರು.

ಸೆ.22ರಂದು ರಾಯಚೂರು ಗ್ರಾಮೀಣ ಕ್ಷೇತ್ರದ ವ್ಯಾಪ್ತಿಯ ದೇವಸುಗೂರ ಗ್ರಾಮಕ್ಕೆ ಭೇಟಿ ನೀಡಿ, ಶ್ರೀ ಸೂಗುರೇಶ್ವರ ದೇವಸ್ಥಾನದ ಹತ್ತಿರ 51 ಅಡಿ ಎತ್ತರದ ಶ್ರೀ ವೀರಭದ್ರೇಶ್ವರ ಸ್ವಾಮಿಯ ಮೂರ್ತಿ ಮತ್ತು 31 ಅಡಿ ಎತ್ತರದ ಶಿವಲಿಂಗ ಧಾರಣೆಯ ಆಂಜನೇಯ ಸ್ವಾಮಿ ಮೂರ್ತಿ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ದೇಶ ಮೂಲತಃ ಹಳ್ಳಿಗಳ ದೇಶವಾಗಿದೆ. ಪ್ರತಿಯೊಂದು ಹಳ್ಳಿಗಳು ಈಗ ಬದಲಾಗುತ್ತಿವೆ. ಗ್ರಾಮೀಣ ಜನರ ನಿರೀಕ್ಷೆಗಳು ಬದಲಾಗುತ್ತಿವೆ. ಈ ದಿಶೆಯಲ್ಲಿ ತಾವು ಗ್ರಾಮಗಳ ಬಗ್ಗೆ ವಿಶೇಷ ಕಾಳಹಿ ವಹಿಸಿದ್ದು, ಗ್ರಾಮೀಣ ಜನರ ಬದುಕು ಸುಧಾರಿಸುವ ನಿಟ್ಟಿನಲ್ಲಿ ತಾವು ಯೋಚಿಸಿ ಆಯಾ ಕಡೆಗಳಲ್ಲಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಅಧಿಕಾರಿಗಳಿಗೆ ಸೂಚಿಸಿ ಶ್ರಮಿಸುತ್ತಿರುವುದಾಗಿ ಹೇಳಿದರು.

ಶ್ರೀ ಸೂಗೂರೇಶ್ವರರು ಈ ಭಾಗದ ಆರಾಧ್ಯ ದೈವವಾಗಿದ್ದಾರೆ. ಅವರ ಕೃಪಾಶೀರ್ವಾದ ನಮಗೆಲ್ಲರಿಗೂ ಬೇಕು. ದೇವಸ್ಥಾನಕ್ಕೆ ಅಗತ್ಯವಿರುವ ನಾನಾ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ ಎಂದು ಶಾಸಕರು ತಿಳಿಸಿದರು.

ನಾನಾ ಕಾಮಗಾರಿಗೆ ಭೂಮಿಪೂಜೆ: ಶ್ರೀ ಸೂಗುರೇಶ್ವರ ದೇವಸ್ಥಾನದ ಹತ್ತಿರ ನೂತನ ಕಲ್ಯಾಣ ಮಂಟಪ ಅಡುಗೆ ಕೋಣೆ ಮತ್ತು ಭೋಜನಾಲಯ ನಿರ್ಮಾಣ ಕಾಮಗಾರಿಗೆ, ಶ್ರೀ ಸೂಗುರೇಶ್ವರ ದೇವಸ್ಥಾನದ ಆವರಣದಲ್ಲಿ ಶೇಡ್ ನಿರ್ಮಾಣ ಕಾಮಗಾರಿಗೆ ಸಹ ಇದೆ ವೇಳೆ ಶಾಸಕರು ಭೂಮಿಪೂಜೆ ನೆರವೇರಿಸಿದರು.

ಈ ಸಂಧರ್ಭದಲ್ಲಿ ದೇವಸುಗೂರ ಬ್ಲಾಕ್ ಅಧ್ಯಕ್ಷರು, ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಹಿರಿಯ ಮುಖಂಡರು, ನಾಮನಿರ್ದೇಶನ ಸದಸ್ಯರು, ಅಧಿಕಾರಿಗಳು, ಗ್ರಾಮ ಪಂಚಾಯತ್ ಸದಸ್ಯರು, ಕಾರ್ಯಕರ್ತರು ಗ್ರಾಮಸ್ಥರು ಉಪಸ್ಥಿತರಿದ್ದರು.

# ಮೊದಲನೇಯ ಪುಟದಿಂದ

## ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ಗಣತಿದಾರರಿಗೆ ತರಬೇತಿ

ತರಬೇತಿ ಕಾರ್ಯಕ್ರಮದಲ್ಲಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಭಾಗಯ್ಯ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ. ಡಿ., ಶಿಶು ಅಭಿವೃದ್ಧಿ ಅಧಿಕಾರಿ ಮನ್ಸೂರ್ ಅಹ್ಮದ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸುರೇಶ ಕುರ್ಡಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂಗಮೇಶ ಮುಧೋಳ್ ಸೇರಿದಂತೆ 300ಕ್ಕೂ ಹೆಚ್ಚು ಗಣತಿದಾರರು ಭಾಗವಹಿಸಿದ್ದರು.

## ಮಕ್ಕಳು ಆರೋಗ್ಯವಾಗಿದ್ದಲ್ಲಿ ಮಾತ್ರ ಉತ್ತಮ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಾಗುತ್ತದೆ

ಯೋಜನಾಧಿಕಾರಿ ಮನ್ಸೂರ್ ಅಹ್ಮದ್, ಸಿರವಾರ ಶಿಶುಅಭಿವೃದ್ಧಿ ಯೋಜನಾಧಿಕಾರಿ ಶಶಿಕಾಂತ ಡಿ.ಗೋಕುಲ್ ಮಾಹಿತಿ ನೀಡಿದರು.

ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಆನಂದ ಹೆಚ್. ಕೊಣ್ಣೂರು , ಸಿ.ಪಿ.ಐ. ಎಂ.ಶಶಿಕಾಂತ, ತಾ.ವಕೀಲರ ಸಂಘದ ಅಧ್ಯಕ್ಷರಾದ ರವಿಕುಮಾರ ಪಾಟೀಲ್, ಉಪಾಧ್ಯಕ್ಷರಾದ ಮನೋಹರ್ ವಿಶ್ವಕರ್ಮ, ಪ್ರ.ಕಾರ್ಯದರ್ಶಿ ಚನ್ನಬಸವನಾಯಕ ಬಲ್ಲಟಗಿ, ಈಶಪ್ಪ ಬೈಲಮರ್ಚಡ್,ಖಜಾಂಜಿ ದತ್ತಾತ್ರೇಯ ಹಿರೇಕೋಟ್ನೆಕಲ್, ಮಲ್ಲೇಶ ಮಾಚನೂರ್ ಹಿರಿಯ ನ್ಯಾಯಾವಾದಿಗಳಾದ ಗುಮ್ಮ ಬಸವರಾಜ,ಟಿ.ಶಂಕರಗೌಡ ಪಾಟೀಲ್, ಕೆ.ಶರಣಬಸಪ್ಪ ಪಾಟೀಲ್ ,ಶ್ರೀನಿವಾಸ ನಂದಿಹಾಳ್, ಕೋರವಯ್ಯನಾಯಕ, ಯಲ್ಲಪ್ಪ ಬಾದರದಿನ್ನಿ, ಎಮ್.ಅಮರೇಶ ಪಾಟೀಲ್, ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ,ಸಹಾಯಕಿಯರು, ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿಗಳು ಸಿಬ್ಬಂದಿಗಳು ಗ್ರಾಮದ ಮಹಿಳೆಯರು ಭಾಗವಹಿಸಿದರು.

## ಯಾವುದೇ ಜಾತಿ ಇರಲಿ, ಹಿಂದೂ ಧರ್ಮ ಎಂದೇ ಬರೆಸಿ : ವೀರನಗೌಡ ಲೆಕ್ಕಿಹಾಳ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಸೆ.22–** ಜಾತಿ ಸಮೀಕ್ಷೆ ಹೆಸರಿನಲ್ಲಿ ಹಿಂದೂಗಳ ಒಗ್ಗಟ್ಟು ಒಡೆಯಲು ರಾಜ್ಯ ಸರಕಾರದ ಸಂಚು ರೂಪಿಸಿದೆ. ರಾಜ್ಯದಲ್ಲಿ ಯಾವುದೇ ಜಾತಿಯವರು ಇರಲಿ ಎಲ್ಲರೂ ಧರ್ಮ ಕಾಲಂನಲ್ಲಿ ಮಾತ್ರ ಹಿಂದೂ ಎಂದೇ ಬರೆಸಬೇಕು ಎಂದು ಬಿಜೆಪಿ ರಾಯಚೂರು ಜಿಲ್ಲಾಧ್ಯಕ್ಷ ವೀರನಗೌಡ ಪಾಟೀಲ್ ಲೆಕ್ಕಿಹಾಳ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಜಾತಿ ಸಮೀಕ್ಷೆ ಹೆಸರಲ್ಲಿ ಹಿಂದೂ ಸಮಾಜವನ್ನು ಒಡೆಯುವ ಜೊತೆಗೆ ಹಲವಾರು ಸಮಾಜದಲ್ಲಿ ಗೊಂದಲ ಸೃಷ್ಟಿಸಲಾಗುತ್ತಿದೆ. ಏನು ಬರೆಸಬೇಕು ಎನ್ನುವದು ಬಹಳಷ್ಟು ಸಮಾಜದ ಸ್ವಾಮೀ ಜಿಗಳು ಗೊಂದಲದಲ್ಲಿದ್ದಾರೆ. ಕುರುಬರು, ನಾಯಕರು, ಒಕ್ಕಲಿಗ, ಲಿಂಗಾಯತ, ಕುರುಬರು, ಬೋವಿ, ವಡ್ಡರ್, ಮಾದಿಗ ಸೇರಿ ಯಾವುದೇ ಜಾತಿ ಇರಲಿ ಧರ್ಮ ಕಾಲಂನಲ್ಲಿ ಮಾತ್ರ ಹಿಂದೂ ಎಂದೇ ಬರೆಸಬೇಕು. ಇಲ್ಲದೇ ಇರುವ 48 ಜಾತಿಗಳನ್ನು ರಾಜ್ಯ ಸರಕಾರ ಸಮೀಕ್ಷೆ ಹೆಸರಿನಲ್ಲಿ ಸೃಷ್ಟಿಮಾಡಿದೆ. ಇದಕ್ಕೆ ಆಡಳಿತದಲ್ಲಿರುವ ಕೆಲವು ಶಾಸಕರು, ಸಚಿವರುಗಳೇ ವಿರೋಧ ವ್ಯಕ್ತಪಡಿಸಿದ್ದಾರೆ. ತರಾತುರಿಯಲ್ಲಿ




ಸಮೀಕ್ಷೆ ಮಾಡಲು ಹೊರಟಿರುವುದು ಅವೈಜ್ಞಾನಿಕವಾಗಿದೆ. ಸಮೀಕ್ಷೆದಾರರಿಗೂ ಸಮರ್ಪಕವಾಗಿ ತರಬೇತಿ ಇಲ್ಲ. ಯಾವ ಕಾಲಂನಲ್ಲಿ ಏನು ಬರೆಸಬೇಕು ಎನ್ನುವುದೇ ಸ್ಪಷ್ಟವಾಗಿಲ್ಲ. ಎಲ್ಲರೂ ಗೊಂದಲ ದಲ್ಲಿಯೇ ಇದ್ದಾರೆ. ಸರಕಾರದ ಹುನ್ನಾರ ತಡೆಯಲು ಎಲ್ಲಾ ಹಿಂದೂಗಳು ಒಗ್ಗಟ್ಟಾಗಿ ಗೊಂದಲಕ್ಕೆ ಒಳಗಾಗದೇ ಧರ್ಮ ಕಾಲಂನಲ್ಲಿ ಹಿಂದೂ ಎಂದೇ ಬರೆಸಬೇಕು ಎಂದು ಲೆಕ್ಕಿಹಾಳ ಕರೆ ನೀಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಕೆ.ನಾಗಭೂಷಣ, ಮುಖಂಡರಾದ ಗಿರಿಮಲ್ಲನಗೌಡ ಕರಡಕಲ್, ವೆಂಕನಗೌಡ ಐದನಾಳ ಸೇರಿ ಇತರರು ಇದ್ದರು.

## ಧರ್ಮ ಹಿಂದೂ, ಜಾತಿ ಗೊಲ್ಲ ಎಂದು ಬರೆಸಿ : ಪರಮೇಶ ಯಾದವ್




**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು :** ಜಾತಿ ಸಮೀಕ್ಷೆ ವೇಳೆ ಧರ್ಮದ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಗೊಲ್ಲ, ಉಪಜಾತಿ ಕಾಲಂನಲ್ಲೂ ಗೊಲ್ಲ ಎಂದು ಬರೆಸಬೇಕು ಎಂದು ಗೊಲ್ಲ ಸಮಾಜದ ತಾಲೂಕು ಅಧ್ಯಕ್ಷ ಪರಮೇಶ ಯಾದವ್ ಕರೆ ನೀಡಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿನಡೆಸಿದ ಅವರು, ಸಮಾಜದ ಜಿಲ್ಲಾಧ್ಯಕ್ಷರ ಸೂಚನೆಯಂತೆ ಜಾತಿ ಸಮೀಕ್ಷೆ ವೇಳೆ ತಾಲೂಕಿನಲ್ಲಿರುವ ಗೊಲ್ಲ ಸಮುದಾಯದ ಬಾಂಧವರು ಸ್ಪಷ್ಟವಾಗಿ ಜಾತಿ ಮತ್ತು ಉಪಜಾತಿ ಕಾಲಂಗಳಲ್ಲಿ ಗೊಲ್ಲ ಎಂದೇ ಬರೆಸಬೇಕು. ನಮ್ಮದು ಬಡ ಸಮಾಜ. ಹೆಚ್ಚಿನ ಆದಾಯ ನಮಗೆ ಇರುವುದಿಲ್ಲ. ಇದ್ದಷ್ಟು ಸ್ಪಷ್ಟವಾಗಿ ಬರೆಸಬೇಕು. ಯಾವುದೇ ಜಾಲತಾಣದಲ್ಲಿ ಹರಿದಾಡುವ ಮಾಹಿತಿಗಳಿಗೆ ಕಿವಿ ಕೊಡಬಾರದು

ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಮಾಜದ ಪ್ರಧಾನ ಕಾರ್ಯದರ್ಶಿ ನಾಗರಾಜ ಯಾದವ್, ಸಂಜೀವಕುಮಾರ, ಗಂಗಾಧರ ಗೊಲ್ಲ, ಮಂಜುನಾಥ ಯಾದವ್, .ಉಮೇಶ ಯಾದವ್, ಸಿದ್ದಪ್ಪ ಯಾದವ್ ಸೇರಿ ಇತರರು ಇದ್ದರು.

## ಜಾಲ್ಸ-ಎ-ಸೀರತ್-ಎ ಖಾತಿಮೂನ್ ನಬೀಯ್ಯಿನ್ ಮುಹಮ್ಮದ್ ಮುಸ್ತಫಾ ಕಾರ್ಯಕ್ರಮ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.22–**ಪಟ್ಟಣದ ಈದ್ಗಾ ಶಾದಿ ಮಹಲ್ ಸಭಾಂಗಣದಲ್ಲಿ ಅಂಜುಮಾನ್.ಎ. ಮೆಹದವಿಯ ಇಸ್ಲಾಮಿಕ್ ಸಮಿತಿ ಮಾನ್ವಿ ವತಿಯಿಂದ ನಡೆದ ಪ್ರವಾದಿ ಮುಹಮ್ಮದ್ (ಸ.ಅ) ಅವರ 1500 ನೇ ಜನ್ಮದಿನದ ಅಂಗವಾಗಿ ಜಾಲ್ಸ-ಎ-ಸೀರತ್-ಎ ಖಾತಿಮೂನ್ ನಬೀಯ್ಯಿನ್ ಮುಹಮ್ಮದ್ ಮುಸ್ತಫಾ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರದ ಮೋಲ್ವಿ ಕಾಮಿಲ್ ಜಾಮಿಯಾ ನಿಜಾಮಿಯಾ ಆಹೇಲೆ ಮೈಂದರರಾಗಿ ಸೈಯಾದ್ ನರ್ಮುಹಮ್ಮದ್ ತಹೀಸೀನ್ ಕುಂದುಮೀರಿ ಕಿಬ್ಲಾ ಮಾತನಾಡಿ ಇಸ್ಲಾಂ ಧರ್ಮದ ಕುರಾನ್ ನಲ್ಲಿ ತಿಳಿಸಿರುವಂತೆ ನಿಮ್ಮ ನೆರೆಹೊರೆಯವರ ಹತ್ತಿರ ಒಳ್ಳೆಯವಾರಾಗಿ ಇರೆದೆ ಇದಲ್ಲಿ ಹಾಗೂ ನಮಾಜ್,ರೋಜಾ ಜಕಾತಿ,ಹಜ್ ಯಾತ್ರೆಗೆ ಹೊಗದೆ ಇರುವುದರಿಂದ ನೀವು ಮಾಡುವ ಪ್ರಾರ್ಥನೆ, ರೋಜಾ ಇವುಗಳು ಅಲ್ಲಹನಲ್ಲಿ ಸ್ವೀಕರವಾಗುವುದಿಲ್ಲ ನಿಮ್ಮ ಕೊನೆಯ ಸಮಯದಲ್ಲಿ ನೀವು ಗಳಿಸಿದ ಸಂಪತ್ತು.ಆಸ್ತಿ, ಕುಟುಂಬದವರು ಯಾರು ಕೂಡ ನಿಮ್ಮ ಹಿಂದೆ ಬರುವುದಿಲ್ಲ ಅದ್ದರೆ ನಿಮ್ಮ ಜೀವನದಲ್ಲಿ ನೀವುಗಳು ಸಲ್ಲಿಸಿದ ಪ್ರಾರ್ಥನೆ ,ಉತ್ತಮ ಕಾರ್ಯಗಳು ಮಾತ್ರ ನಿಮ್ಮ ಹಿಂದೆ ಬರುತ್ತಾವೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಜರತ್ ಪೀರ್-ಒ-ಮುರ್ಷಿದ್ ಅಲ್ಹಾಜ್ ಸೈಯದ್ ಮುಸ್ತಫಾ ಮಿಯಾ ಯೂಸುಫಿ ಸಾಹಬ್ ಕಿಬ್ಲಾ ವಹಿಸಿಕೊಂಡಿದ್ದರು. ಹೈದರಾಬಾದ್‌ನ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ನ ಸದಸ್ಯರಾದ ಸೈಯದ್




ಮಸೂದ್ ಹುಸೇನ್ ಮುಜ್ತಾಹಿದಿ ಸಾಹೆಬ್ ಕಿಬ್ಲಾ, ಹಫೀಜ್ ಸಾಹಿಹೈನ್ ಷರೀಫೈನ್ ಸೈಯದ್ ನುಸ್ರತ್ ತನ್ವೀರ್ ಮಿಯಾ ಸಾಹಬ್ ಕಿಬ್ಲಾ ಮಾತನಾಡಿದರು,

ಅಹೇಲೆ ಸುನ್ನತ್ ಉಲ್ ಜಮಾತ್ ಮಾನ್ವಿಯ ಹಜರತ್ ಸೈಯದ್ ಶಾ ಸಜ್ಜದ್ ಹುಸೇನಿ ಮತ್ವಾಲೆ ಸಾಹೇಬ್, ಇಮಾಮ್ ಈ ಖತೀಬ್ ಮಸೀದ್-ಇ-ಆಯೇಶಾ ಮಾನ್ವಿ ಮೌಲಾನಾ ಮೋಹಮ್ಮದ್ ಸಿಕಂದರ್ ಖಾಸ್ಮಿ, ಜಮಾತೆ ಇಸ್ಲಾಮಿ ಹಿಂದ್ ತಾ.ಅಧ್ಯಕ್ಷರಾದ ಜನಾಬ್ ಅಬ್ದುಲ್ ರೆಹಮಾನ್ ಸಾಹೆಬ್

ಅಂಜುಮಾನ್.ಎ. ಮೆಹದವಿಯ ಇಸ್ಲಾಮಿಕ್ ಸಮಿತಿ ಮಾನ್ವಿ ತಾ.ಅಧ್ಯಕ್ಷರಾದ ಸಾಬೀರ್ ಪಾಷಾ ಸೇರಿದಂತೆ ಮುಸ್ಲಿಂ ಸಮಾಜದ ಹಿರಿಯ ಮುಖಂಡರು ಇದ್ದರು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

## ಹಿಂದುಳಿದ ವರ್ಗಗಳ ಆಯೋಗದಿಂದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ: ಸಾರ್ವಜನಿಕರಿಗೆ ಜಿಲ್ಲಾಡಳಿತದಿಂದ ಸಲಹೆ

**ರಾಯಚೂರು,ಸೆ.22–**ರಾಜ್ಯ ಹಿಂದುಳಿದ ವರ್ಗಗಳ ಆಯೋಗ 'ದಿಂದ ನಡೆಯುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ಗಾಗಿ ಸೆ.22ರಿಂದ ನವೆಂಬರ್ 07ರವರೆಗೆ ಗಣಿತಿದಾರರು ಮನೆಮನೆಗೆ ಭೇಟಿ ನೀಡಿ ಕುಟುಂಬದ ಅಂಕಿ-ಅಂಶಗಳನ್ನು ಸಂಗ್ರಹಿಸುವರು.

ರಾಜ್ಯದ ಎಲ್ಲಾ ವರ್ಗಗಳ/ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ಮುಖಾಂತರ ಸಮಗ್ರ ಅಂಕಿ-ಅಂಶಗಳನ್ನು ಸಂಗ್ರಹಿಸುವುದು. ಅಲ್ಲದೆ ಸಮೀಕ್ಷೆಯಲ್ಲಿ ಅನುಸರಿಸಿದ ವಿವಿಧ ಮಾನದಂಡಗಳ ಆಧಾರದ ಮೇಲೆ ಸಂಗ್ರಹಿಸಿದ ಅಂಕಿ-ಅಂಶಗಳ ಹಿನ್ನೆಲೆಯಲ್ಲಿ ಎಲ್ಲಾ ಜನಾಂಗದಲ್ಲಿರುವ ದುರ್ಬಲ/ ಹಿಂದುಳಿದವರನ್ನು ಗುರುತಿಸಿ ಅವರ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ರೂಪಿಸು ವುದು ಸಮೀಕ್ಷೆಯ ಮುಖ್ಯ ಉದ್ದೇಶವಾಗಿದೆ.

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕಾರ್ಯಕ್ಕಾಗಿ ನವಂಬರ್ 07ರವರೆಗೆ ಗಣತಿದಾರರು ಮನೆಮನೆಗೆ ಭೇಟಿ ನೀಡಿ ಕುಟುಂಬದ ಅಂಕಿ-ಅಂಶಗಳನ್ನು ಸಂಗ್ರಹಿಸುವರು ಸಮೀಕ್ಷೆ ಕಾರ್ಯದಲ್ಲಿ ಪ್ರಶ್ನೆಗಳು ಉದ್ಭವಿಸಿದರೆ ಅವುಗಳನ್ನು ಈಗಾಗಲೇ ಮನೆಗಳಿಗೆ ಅಂಟಿಸಿದ ಯುಹೆಚ್‌ಐಡಿ ಸ್ಟಿಕರ್ ಅಳಸಿ ಹೋಗಿದ್ದರೇ/ಕಾಣದೇ ಇದ್ದರೆ ಗಣತಿದಾರರ ಮೊಬೈಲ್ ಅಪ್ ಯುಹೆಚ್‌ಐಡಿ ಸಂಖ್ಯೆಗಳ ು ಲಭ್ಯವಿದ್ದು, (ಯುಹೆಚ್‌ಐಡಿ ಸಂಖ್ಯೆಯು ವಿದ್ಯುತ್ ಮೀಟರ್‌ನ ಆರ್.ಆರ್. ನಂಬರ ಜೊತೆ ಜನರೇಟ್ ಆಗಿರುತ್ತದೆ) ಆ ನಂಬರ ಗಳಲ್ಲಿ ಸದರಿ ಮನೆಯ ಆರ್.ಆರ್.ಸಂಖ್ಯೆ ಹೊಂ ದಾಣಿಕೆಯಾ ಗುವ ಯುಹೆಚ್‌ಐಡಿ ಸಂಖ್ಯೆಯನ್ನು ಉಪಯೋ ಗಿಸುವುದು. ಮತ್ತು ಈ ಯುಹೆಚ್‌ಐಡಿ ಸಂಖ್ಯೆ ಆಯ್ಕೆ ಮಾಡಿದ ನಂತರ ಅಪ್ ನಲ್ಲಿ ಲಭ್ಯವಿರುವ ನೇವಿಗೇಷನ್ ಅದೇ ಮನೆಯ ಲೋಕೇಷನ್ ತೋರಿಸಿದ್ದಲ್ಲಿ ಸದರಿ ಯುಹೆಚ್‌ಐಡಿ ನಂಬರನ್ನು ಆ ಮನೆಯ ಸಮೀಕ್ಷೆಗೆ ಉಪಯೋಗಿಸಬಹುದಾಗಿದೆ.

ಮನೆಗಳಿಗೆ ಯುಹೆಚ್‌ಐಡಿ ನಂಬರ್ ಜನರೇಟ್ ಮಾಡದ ಸಂದರ್ಭದಲ್ಲಿ ಮತ್ತು ಸ್ಟೀಕರಿಂಗ್ ಲಗತ್ತಿಸದ ಸಂದರ್ಭದಲ್ಲಿ ಗಣತಿದಾರರ ಸಮೀಕ್ಷೆ ಮೊಬೈಲ್ ಅಪ್ ನಲ್ಲಿ ಜನರೇಟ್ ಯುಹೆಚ್‌ಐಡಿ ನಂಬರ್ ಆಯ್ಕೆ ಬಳಸಿ ಸಮೀಕ್ಷೆಯನ್ನು ಪೂರ್ಣಗೊಳಿಸಲು ಅವಕಾಶ ಇರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಆಯೋಗದ ಸಹಾಯವಾಣಿ ಸಂಖ್ಯೆ: 8050770004ಗೆ ಕರೆ ಮಾಡಬಹುದಾಗಿದೆ. ಅಥವಾ https://ksdbc.karnataka.gov.in ಗೆ ಭೇಟಿ ನೀಡಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ರಾಜಶೇಖರಗೆ ಜಿಲ್ಲಾ ಆದರ್ಶ ಉಪನ್ಯಾಸಕ ಪ್ರಶಸ್ತಿ

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಸೆ.22–** ರಾಯಚೂರು ಜಿಲ್ಲೆಯ ವಿವಿಧ ಖಾಸಗಿ ಶಾಲಾ, ಕಾಲೇಜಗಳ ಆಡಳಿತ ಮಂಡಳಿಗಳ ಒಕ್ಕೂಟದ ವತಿಯಿಂದ ಕೊಡಮಾಡುವ 2025-26 ನೇ ಸಾಲಿನ *ಜಿಲ್ಲಾ ಆದರ್ಶ ಉಪನ್ಯಾಸಕ ಪ್ರಶಸ್ತಿಯನ್ನು ಲಿಂಗಸುಗೂರ ಪಟ್ಟಣದ ಸ್ವಾಮಿ ವಿವೇಕಾನಂದ ಮೆಡಿಕಲ್ ಕಾಲೇಜಿನ ಪ್ರಚಾರ್ಯರಾದ ರಾಜಶೇಖರ ಹಿರೇಮಠ ಪಡೆದುಕೊಂಡಿದ್ದು ಸಂಸ್ಥೆಯ ಘನತೆ ಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ಸಂಸ್ಥೆಯ ಅಧ್ಯಕ್ಷ ಶಾಂತಗೌಡ ಪಾಟೀಲ್ ಹರ್ಷ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಸ್ವಾಮಿ ವಿವೇಕಾನಂದ ಮೆಡಿಕಲ್ ಕಾಲೇಜಿನ ಅಧ್ಯಕ್ಷ ಮಾತನಾಡಿ,ರಾಜಶೇಖರ ಹಿರೇಮಠ ಸುಮಾರು ವರ್ಷಗಳಿಂದ ನಮ್ಮಸಂಸ್ಥೆಯಲ್ಲಿ ,ಪ್ರಾಚಾರ್ಯರಾಗಿ ವಿದ್ಯಾರ್ಥಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ ಸಂಸ್ಥೆಯ ಯಶೋಗಾತಿಗೆ ಇವರ ಕೊಡುಗೆ ಅಮೋಘವಾದದ್ದು, ಶ್ರೀಯುತರಿಗೆ ಇನ್ನಷ್ಟು ಪ್ರಶಸ್ತಿಗಳು ಲಭಿಸಲಿ ಎಂದು ಶುಭ ಹಾರೈಸಿದರು.

"ಖಾಸಗಿ ಶಿಕ್ಷಣ ಸಂಸ್ಥೆಗಳು ಒಕ್ಕೂಟದಿಂದ ಕೊಟ್ಟ ಜಿಲ್ಲಾ ಆದರ್ಶ ಉಪನ್ಯಾಸಕ ಪ್ರಶಸ್ತಿ ನನಗೆ ಸಿಕ್ಕಿದ್ದು ಖುಷಿ ತಂದಿದೆ, ಈ ಪ್ರಶಸ್ತಿ ನನಗೆ ಮತ್ತಷ್ಟು ಜವಾಬ್ದಾರಿಯನ್ನು ಹೆಚ್ಚಿಸಿದೆ. ಪ್ರಮಾಣಿಕವಾಗಿ,ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ್ದೆ, ಮುಂದೆಯೂ ಸಂಸ್ಥೆಯ ಏಳಿಗೆಗೆ,ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ಶ್ರೇಮಿಸುವೆ" ಎಂದು ರಾಜಶೇಖರ್ ಹಿರೇಮಠ ಅವರು ತಿಳಿಸಿದರು.



ಇವರಿಗೆ ಕಾಲೇಜಿನ ಸರ್ವ ಸಿಬ್ಬಂದಿಗಳು,ವಿದ್ಯಾರ್ಥಿಗಳು ಹಾಗೂ ಹಳೆಯ ವಿದ್ಯಾರ್ಥಿ ಬಳಗ ಶುಭ ಹಾರೈಸಿದರು.

## ಗ್ರಾಮೀಣ ದಸರಾ: ಸೆ.25ರಂದು ಹಗ್ಗ ಜಗ್ಗಾಟ, ಕಬಡ್ಡಿ, ಸಸಿ ನೆಡುವ ಕಾರ್ಯಕ್ರಮ

**ರಾಯಚೂರು,ಸೆ.22–** ಗ್ರಾಮೀಣ ದಸರ ಅಂಗವಾಗಿ ಸಿಂಧನೂರ ತಾಲೂಕಿನ ಆರ್.ಹೆಚ್.ಕಾಲೋನಿ-2ರ ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ಸೆ.25ರ ಸಂಜೆ 4.30ಕ್ಕೆ ದಸರಾ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಅಂದು ಮಹಿಳೆಯರಿಂದ ಪೂರ್ಣ ಕುಂಭ-ಕಳಸ ಮತ್ತು ಆಕರ್ಷಕ ಕಲಾ ತಂಡಗಳೊಂದಿಗೆ ಆರ್.ಹೆಚ್.ಕಾಲೋನಿ-2ರ ಕೆರೆಯಿಂದ ಸರಕಾರಿ ಶಾಲೆವರೆಗೆ ಮೆರವಣಿಗೆ ಹಾಗೂ ಹಸಿರು ದಸರಾ ಕಾರ್ಯಕ್ರಮದಡಿ ಕ್ಲಷ್ಟರ್ ವ್ಯಾಪ್ತಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿಗಳಾದ ನೀತೀಶ್ ಕೆ., ಅವರು ಕಾರ್ಯಕ್ರಮ ಉದ್ಘಾಟಿಸುವರು.ಮುಖ್ಯ ಅತಿಥಿಗಳಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಭಾಗಿಯಾಗುವವರು.ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು: ಸರಿಗಮಪ ಖ್ಯಾತಿಯ ಸುಪ್ರೀತ್ ಮತ್ತು ವರ್ಣಾ ಬೆಂಗಳೂರು ಇವರಿಂದ ಸಂಗೀತ ಕಾರ್ಯಕ್ರಮ, ರಂಗಧಾರ ರೇಪರ್ಟರಿ (ರಿ) ಕೊಪ್ಪಳ ತಂಡದಿಂದ ಶಿಕ್ಷಣ, ಆರೋಗ್ಯ, ಕೃಷಿಗೆ ಸಂಬಂಧಿಸಿದಂತೆ ಜಾಗೃತಿ ರೂಪಕ ನಾಟಕಗಳು, ಗ್ರಾಮೀಣ ಕಲಾ ತಂಡಗಳಿಂದ ಕಲೆ-ಸಂಸ್ಕೃತಿ-ಜನಪದ ಕಾರ್ಯಕ್ರಮಗಳು ಹಾಗೂ ವಿವಿಧ ಕಾಲೇಜು ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳ ಲಾಗಿದೆ.

ಆರ್.ಹೆಚ್.ಕಾಲೋನಿ-2ರಲ್ಲಿ ಕ್ಲಸ್ಟರ್ ಮಟ್ಟದ ಕ್ರೀಡಾ ಸ್ಪರ್ಧೆಗಳು ನಡೆಯಲಿದ್ದು ಪುರುಷರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ ಪಂದ್ಯಾವಳಿಗಳಿವೆ. ಮಹಿಳೆಯರಿಗಾಗಿ ಕೆಸರಿನಲ್ಲಿ ಹಗ್ಗ ಜಗ್ಗಾಟ, ಕಬಡ್ಡಿ, ರಂಗೋಲಿ, ರೊಟ್ಟಿ ತಟ್ಟುವ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿ ಪ್ರಕಟಣೆ ತಿಳಿಸಿದೆ. ಸಿಂಧನೂರು ತಾಲೂಕ ಆಡಳಿತ, ತಾಲೂಕ ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ನಡೆಯಲಿವೆ.

## ನದಾಫ್ ಅಥವಾ ಪಿಂಜಾರ ಎಂದು ಬರೆಸಬೇಕು : ರಹಮತ್ ಅಲಿ

**ಯುವ ಮಾರ್ಗ ಸುದ್ದಿ**

**ಮಾನ್ವಿ,ಸೆ.22–**ಕರ್ನಾಟಕ ರಾಜ್ಯ ನದಾಫ್, ಪಿಂಜಾರ ಸಂಘ ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹ್ಮದ ರಹಮತ್ ಅಲಿ ಮಾತನಾಡಿ ರಾಜ್ಯದಲ್ಲಿ ಪಿಂಜಾರ, ನದಾಫ್ ಸಮುದಾಯದವರು 35 ಲಕ್ಷ ಜನಸಂಖ್ಯೆಯಲ್ಲಿದ್ದು ಆರ್ಥಿಕವಾಗಿ ಅತ್ಯಂತ ಹಿಂದುಳಿದಿರುವುದರಿಂದ ರಾಜ್ಯ ಸರ್ಕಾರದಿಂದ ಸೆ.22 ರಿಂದ ಅ.7 ರವರೆಗೆ ನಡೆಸಲಾಗುತ್ತಿರುವ ಸಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಿಂಜಾರ, ನದಾಫ್ ಸಮುದಾಯದವರು ಕಾಲಂ ನಂ.8 ರಲ್ಲಿ ಇಸ್ಲಾಂ ಹಾಗೂ ಕಾಲಂ ನಂ.9 ರಲ್ಲಿ ಪಿಂಜಾರ ಅಥಾವ ನದಾಫ್ ಎಂದು ಕಾಲಂ ನಂ. 15 ರಲ್ಲಿ ನಮ್ಮ ಮಾತೃ ಭಾಷೆ ಉರ್ದು ಎಂದು ಬರೆಸಬೇಕು ಕಾಲಂ ನಂ.30 ರಲ್ಲಿ ನಮ್ಮ ಸಮಾಜದ ಕುಲಕಸುಬು ಹತ್ತಿ ಶುದ್ಧಗೊಳಿಸುವುದು ಎಂದು ಬರೆಸಬೇಕು ಎಂದು ಕೋರಿದರು.



# ರಾಷ್ಟ್ರೀಯ ಹೆದ್ದಾರಿ 748ಎಗೆ ಭೂಸ್ವಾಧೀನ ಘೋಷಣೆ: ಭೂಸರ್ವೆಗೆ ಸಹಕರಿಸಲು ಸಹಾಯಕ ಆಯುಕ್ತರ ಮನವಿ

**ರಾಯಚೂರು,ಸೆ.22–** ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಅವರ ಅಧಿಸೂಚನೆ ಸಂಖ್ಯೆ ಎಸ್‌ಓ 3715(ಇ) ದಿನಾಂಕ: 13.08.2025 ರಂದು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 ಕಲಂ 3(ಎ) ರಂತೆ ಎನ್‌ಹೆಚ್–748ಎ ಕ್ಕೆ ಸಂಬಂಧಿಸಿದಂತೆ 273.4 ಕಿ.ಮೀ ಯಿಂದ 321 ಕಿ.ಮೀ ರವರೆಗೆ ರಸ್ತೆಗೆ ಒಳಪಡುವ ದೇವದುರ್ಗ ತಾಲೂಕಿನ ತಿಪ್ಪಲದಿನ್ನಿ ಗ್ರಾಮ, ರಾಯಚೂರು ತಾಲೂಕಿನ ಕಾಟ್ಲಟ್ಕೂರು, ಮಂಡಲಗೇರಾ, ಸಿಂಗನೋಡಿ, ಪೋತ್ಗಲ್, ಅಸ್ಕಿಹಾಳ, ರಾಯಚೂರು, ವಡವಟ್ಟಿ, ಬಾಯಿದೊಡ್ಡಿ, ಮನ್ಸಲಾಪುರ, ಕಲ್ಮಲಾ, ಹುಣಸಿಹಾಳ ಹುಡಾ ಮತ್ತು ಯಕ್ಲಾಸಪುರ ಹಾಗೂ ಸಿರವಾರ ತಾಲೂಕಿನ ಸಿರವಾರ್, ಜಾಲಾಪುರ, ಅತ್ನೂರು ಮತ್ತು ಜಕ್ಕಲದಿನ್ನಿ ಗ್ರಾಮಗಳ ಜಮೀನುಗಳನ್ನ ಭೂಸ್ವಾಧೀನಪಡಿಸಿಕೊಳ್ಳಲು ಘೋಷಣೆಯಾಗಿದೆ.

ಆದ್ದರಿಂದ ಈ ಅಧಿಸೂಚನೆಯಂತೆ ಭೂಸ್ವಾಧೀನ ಪ್ರಕ್ರಿಯೆಯನ್ನು ಆದ್ಯತೆ ಮೇರೆಗೆ ಪ್ರಾರಂಭಿಸಲು ಸರ್ಕಾರದಿಂದ ಸೂಚನೆಗಳಿರುವುದರಿಂದ ಮತ್ತು ಈ ಯೋಜನೆಯು ಕೇಂದ್ರ ಸರ್ಕಾರದ ಮಹತ್ವದ ಯೋಜನೆ ಆಗಿರುವುದರಿಂದ ದಿನಾಂಕ: 22.09.2025 ರಂದು ಜಮೀನುಗಳ ಜಂಟಿ ಮೇಜನ ಸರ್ವೆ (Joint Measurement Survey – JMS) ಕಾರ್ಯವನ್ನು ಸಿರವಾರ ತಾಲೂಕಿನಿಂದ ಪ್ರಾರಂಭಿಸಲಾಗುತ್ತದೆ.

ಈ ಅಧಿಸೂಚನೆಯಲ್ಲಿ ನಮೂದಾದ ಸರ್ವೆ ನಂಬರಗಳ ಭೂ ಮಾಲೀಕರು, ಸಾರ್ವಜನಿಕರು, ಸ್ಥಳೀಯರು ಭೂ ಸರ್ವೆ ಮಾಡಲು ಆಗಮಿಸುವ ಅಧಿಕಾರಿ ಸಿಬ್ಬಂದಿಯೊಂದಿಗೆ ಸಹಕರಿಸಲು ಕೋರಲಾಗಿದೆ. ಮುಂದುವರೆದು, ಈ ಅಧಿಸೂಚನೆಯಲ್ಲಿ ನಮೂದಾದ ಸರ್ವೆ ನಂಬರ್‌ಗಳಲ್ಲಿ ಯಾವುದೇ ತರಹದ ವಹಿವಾಟು, ಮನೆ ಅಥವಾ ಕಟ್ಟಡಗಳನ್ನು ಕಟ್ಟುವುದು, ಗಿಡ–ಮರಗಳನ್ನು ಹಾಕುವುದು, ಭೂಮಿಯನ್ನು ಅಭಿವೃದ್ಧಿ ಪಡಿಸುವುದು, ಭೂಮಿಯನ್ನು ಬಿನ್ ಶೇತ್ಕಿಯನ್ನು ಮಾಡುವುದು, ಬೋರವೆಲ್ ಹಾಕುವುದನ್ನು ಇತರೆ ಯಾವುದೇ ಮಾಲ್ಕಿಗಳನ್ನು ಈ ಅಧಿಸೂಚನೆಯಾದ ದಿನಾಂಕದ ನಂತರ ಕೈಗೊಳ್ಳಬಾರದೆಂದು ರಾಯಚೂರ ಸಹಾಯಕ ಆಯುಕ್ತರ ಕಚೇರಿಯ ಪ್ರಕಟಣೆ ತಿಳಿಸಿದೆ.

# ಹೆಚ್‌ಎಎಲ್‌ನಲ್ಲಿ ವಿವಿಧ ವೃತ್ತಿಗಳ ಶಿಶಿಕ್ಷು ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು,ಸೆ.22–** ಬೆಂಗಳೂರಿನ ಹಿಂದುಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಹೆಚ್‌ಎಎಲ್)ನಲ್ಲಿ ವಿವಿಧ ವೃತ್ತಿಗಳಲ್ಲಿ ಶಿಶುಕ್ಷು ತರಬೇತಿ ನೀಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಫಿಟ್ಟರ್, ಫೌಡ್ರೀಮ್ಯಾನ್, ರ್ನರ್, ಶೀಟ್ ಮೆಟಲ್ ವರ್ಕರ್, ಮಶಿನಿಷ್ಟ್, ಟೂಲ್ ಮತ್ತು ಡೈ ಮೇಕರ್, ಎಲೆಕ್ಟ್ರಿಶೀಯನ್, ಸಿ.ಎನ್.ಸಿ ಪ್ರೋಗಾಮರ್ ಕಮ್ ಆಪರೇಟರ್, ವೆಲ್ಡರ್, ಮೆಕ್ಯಾನಿಕ್ ರೆಪ್ರಿಜರೇಷನ್ ಮತ್ತು ಏರ್ ಕಂಡೀಷನಿಂಗ್, ಕೋಪಾ, ಕಾರ್ಪೆಂಟರ್ ವೃತ್ತಿಗಳಲ್ಲಿ ಐ.ಟಿ.ಐ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರಬೇಕು.

ಅಭ್ಯರ್ಥಿಗಳು www.apprenticeship.org/candidate-registration ನಲ್ಲಿ ನೋಂದಣಿ ಮಾಡಿಕೊಂಡ ನಂತರ ನೋಂದಣಿ ಸಂಖ್ಯೆಯ ಪ್ರತಿಯನ್ನು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ರಾಯಚೂರು ಇವರಿಗೆ ಸಲ್ಲಿಸಿ, ವಿದ್ಯಾರ್ಹತೆಯ ಎಲ್ಲಾ ಪ್ರಮಾಣ ಪತ್ರಗಲು, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್ ಜೆರಾಕ್ಸ್ ಪ್ರತಿ, ಅಂಗವಿಕಲ ಅಭ್ಯರ್ಥಿಗಳು ಅಂಗವಿಕಲ ಪ್ರಮಾಣ ಪತ್ರ ಪಾಸಪೋರ್ಟ ಅಳತೆಯ ಭಾವಚಿತ್ರಗಳೊಂದಿಗೆ ಅಕ್ಟೋಬರ್ 12ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ರಾಯಚೂರು ಕಚೇರಿಯ ದೂರವಾಣಿ ಸಂಖ್ಯೆ: 08532–231684 ಅಥವಾ 9901028565ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳಾ ಅಭ್ಯರ್ಥಿಗಳಿಂದ ಕರಾಟೆ–ಸ್ವಯಂ ರಕ್ಷಣಾ ಕೌಶಲ ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು,ಸೆ.22–** ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 6,7,8,9 ಮತ್ತು 11ನೇ ತರಗತಿಯ ವಿದ್ಯಾರ್ಥಿನಿಯರಿಗೆ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಗೆ ನೀಡಲು ಅರ್ಹ ಮಹಿಳಾ ತರಬೇತಿದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ಬ್ಯಾಚ್‌ನಲ್ಲಿ 75–100 ವಿದ್ಯಾರ್ಥಿನಿಯರಿಗೆ ಸೇರಿಸಿ 3 ಬ್ಯಾಚ್‌ಗಳಲ್ಲಿ ವಿದ್ಯಾರ್ಥಿನಿಯರಿಗೆ ಪ್ರಾಥಮಿಕ ಹಾಗೂ ಉನ್ನತೀಕರಣ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಯನ್ನು ವಾರದಲ್ಲಿ ಎರಡು ದಿನಗಳಂತೆ ಆರು ತಿಂಗಳ ನಡೆಸಲಾಗುತ್ತದೆ.

ತರಬೇತಿ ಕಾರ್ಯಕ್ರಮ ನಿಗದಿತ 48 ಗಂಟೆಗಳ (6 ತಿಂಗಳ) ಅವಧಿಗಳಲ್ಲಿ ವಾರದಲ್ಲಿ ಎರಡು ದಿನಗಳಂತೆ ದಿನಕ್ಕೆ 60 ನಿಮಿಷಗಳಲ್ಲಿ ನುರಿತ ಕರಾಟೆ ತರಬೇತಿದಾರರಿಂದ ಕರಾಟೆ–ಸ್ವಯಂ ರಕ್ಷಣಾ ಕೌಶಲ ತರಬೇತಿಯನ್ನು ನಿಯಮಾನುಸಾರ ನೀಡಲಾಗುತ್ತಿದ್ದು, ಜಿಲ್ಲೆಯ ಸ್ವಯಂ ರಕ್ಷಣಾ ಕೌಶಲ್ಯಗಳ ಸಂಸ್ಥೆಗಳು, ನುರಿತ ಮತ್ತು ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ರಾಯಚೂರು ಇವರ ಕಚೇರಿಗೆ ಸೆಪ್ಟೆಂಬರ್ 29ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಾಂಧೀನಗರದಲ್ಲಿ ಸೆ.24ರಂದು ಕ್ರೀಡೆ, ಸಾಂಸ್ಕೃತಿಕ ದಸರಾ

**ರಾಯಚೂರು,ಸೆ.22–** ಸಿಂಧನೂರು ತಾಲೂಕು ಆಡಳಿತ, ತಾಲೂಕ ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರ ತಾಲೂಕಿನ ಗಾಂಧಿನಗರ ಗ್ರಾಮದ ಶಿವಾಲಯದ ಹತ್ತಿರ ಸೆ.24ರ ಸಂಜೆ 4.30 ಗಂಟೆಗೆ ದಸರಾ ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ತೆಲುಗು ಖ್ಯಾತ ಚಿತ್ರ ನಟರಾದ ಮೇಕಾ ಶ್ರೀಕಾಂತ ಅವರು ಕಾರ್ಯಕ್ರಮ ಉದ್ಘಾಟಿಸುವರು.

ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು: ಸರಿಗಮಪ ಖ್ಯಾತಿಯ ವರ್ಣಾ ಬೆಂಗಳೂರು ಇವರಿಂದ ಸಂಗೀತ ಕಾರ್ಯಕ್ರಮ, ರಂಗಧಾರ ರೇಪರ್ಟರಿ (ರಿ) ಕೊಪ್ಪಳ ತಂಡದಿಂದ ಶಿಕ್ಷಣ, ಆರೋಗ್ಯ, ಕೃಷಿಗೆ ಸಂಬಂಧಿಸಿದಂತೆ ಜಾಗೃತಿ ರೂಪಕ ನಾಟಕಗಳು ಹಾಗೂ ಗ್ರಾಮೀಣ ಕಲಾ ತಂಡಗಳಿಂದ ಕಲೆ–ಸಂಸ್ಕೃತಿ–ಜನಪದ ಕಾರ್ಯಕ್ರಮ ಸೇರಿದಂತೆ ವಿವಿಧ ಕಾಲೇಜು ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿಯ ಪ್ರಕಟಣೆ ತಿಳಿಸಿದೆ.

# 2026ರ ಮಾರ್ಚ್ ಅಂತ್ಯದವರೆಗೆ ಗೋಧಿ ದಾಸ್ತಾನು ಮಿತಿ ವಿಸ್ತರಣೆ

**ರಾಯಚೂರು,ಸೆ.22–** ಕೇಂದ್ರ ಸರ್ಕಾರವು ಗೋಧಿ ದಾಸ್ತಾನು ಮಿತಿಗೆ ಸಂಬಂಧಿಸಿದಂತೆ ಹೊರಡಿಸಿದ್ದ ಆದೇಶವನ್ನು 2026ರ ಮಾರ್ಚ್ ಅಂತ್ಯದವರೆಗೆ ವಿಸ್ತರಿಸಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿ ಗೋಧಿ ಮಾರಾಟಗಾರರಿಗೆ 31ನೇ ಮಾರ್ಚ್ 2026ರವರೆಗೆ ಗೋಧಿಗೆ ದಾಸ್ತಾನು ಮಿತಿ ವಿಧಿಸಲಾಗಿದ್ದು, ವ್ಯಾಪಾರಿಗಳು/ಸಗಟು ಮಾರಾಟಗಾರರು 2,000 ಮೇಟ್ರಿಕ್ ಟನ್, ಚಿಲ್ಲರೆ ವ್ಯಾಪಾರಿಗಳು ಪ್ರತಿ ಚಿಲ್ಲರೆ ಮಾರಾಟ ಮಳಿಗೆಗೆ 08 ಮೇಟ್ರಿಕ್ ಟನ್, ದೊಡ್ಡ ಸರಪಳಿ ಚಿಲ್ಲರೆ ವ್ಯಾಪಾರಿಗಳು ಪ್ರತಿ ಔಟ್‌ಲೆಟ್‌ಗೆ ಗರಿಷ್ಠ ಪ್ರಮಾಣ 18 ಮೇಟ್ರಿಕ್ ಟನ್, ಸಂಸ್ಕರಣಾದಾರರ ಮಾಸಿಕ ಸ್ಥಾಪಿತ ಸಾಮರ್ಥ್ಯದ ಎಂ.ಐ.ಸಿ 60 ರಷ್ಟು ಗೋಧಿಯನ್ನಷ್ಟೆ ದಾಸ್ತಾನು ಮಾಡಿಟ್ಟುಕೊಳ್ಳಲು ಅವಕಾಶವಿದೆ.

ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಗೋಧಿ ವರ್ತಕರು ಹಾಗೂ ಪ್ರೋಸೆಸರ್‌ಗಳು ಕೇಂದ್ರ ಸರ್ಕಾರದ ವೆಬ್ ಪೋರ್ಟಲ್ ವಿಳಾಸ: ֆttp://evegoils.nic.in/wsp/login ನಲ್ಲಿ ನೋಂದಣಿ ಮಾಡಿ ನಿಯಮಿತವಾಗಿ ಪ್ರತಿ ಶುಕ್ರವಾರ ದಾಸ್ತಾನು ಗೋಷಿಸುವಂತೆ ಮತ್ತು ಗೋಧಿ ದಾಸ್ತಾನನ್ನು ನಿಯಮಿತವಾಗಿ ತಪಾಸಣೆ ಮಾಡುವಂತೆ ತಿಳಿಸಿದೆ ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

**ರಾಯಚೂರು,ಸೆ.22–** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್ 23ರ ಬೆಳಿಗ್ಗೆ 10.30ಕ್ಕೆ ನಗರದ ಜಿಲ್ಲಾ ಸರ್ಕಾರಿ ಆಯುರ್ವೇದ ಮತ್ತು ಯುನಾದಿ ಆಸ್ಪತ್ರೆಯ ಸಭಾಂಗಣದಲ್ಲಿ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ದಿನೇಶ್ ಆರ್. ಗುಂಡೂರಾವ್, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾದ ಹರ್ಷ ಗುಪ್ತ, ಆಯುಷ್ ಇಲಾಖೆಯ ಆಯುಕ್ತರಾದ ವಿಪಿನ್ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಆಯುರ್ವೇದ ಉಪ ನಿರ್ದೇಶಕರಾದ ಡಾ.ಅನುರಾಧ ಚಂಚಲ್ಕರ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಆಯುಷ್ ಅಧಿಕಾರಿ ಡಾ.ಶಂಕರಗೌಡ ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಇಂದು ಸಿಂಧನೂರ ತಾಲೂಕು ಗ್ರಾಮೀಣ ದಸರಾ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಚಿವರಿಂದ ಚಾಲನೆ

**ರಾಯಚೂರು,ಸೆ.22–** ಸಿಂಧನೂರು ತಾಲೂಕಾಡಳಿತ, ತಾಲೂಕ ಪಂಚಾಯಿತಿ, ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಸಿಂಧನೂರ ತಾಲೂಕಿನ ಸೋಮಲಾಪುರದ ಶ್ರೀ ಕ್ಷೇತ್ರ ಸಿದ್ಧಪರ್ವತ ಅಂಬಾಮಠದಲ್ಲಿ ಸೆ.23ರ ಬೆಳಿಗ್ಗೆ 10 ಗಂಟೆಗೆ ನಮ್ಮ ಸಿಂಧನೂರು ಗ್ರಾಮೀಣ ದಸರಾ ಮತ್ತು ಅಂಬಾದೇವಿ ನವರಾತ್ರಿ ದಸರಾ ಉತ್ಸವ ಉದ್ಘಾಟನೆ ಮತ್ತು ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಹಿಳೆಯರಿಂದ ಪೂರ್ಣ ಕುಂಭ–ಕಳಸ ಮತ್ತು ಆಕರ್ಷಕ ಕಲಾ ತಂಡಗಳೊಂದಿಗೆ ಸೋಮಲಾಪುರದ ಕೆ.ಪಿ.ಎಸ್.ಶಾಲೆ ಹತ್ತಿರದ ಕಟ್ಟೆ ಬಸವಣ್ಣ ದೇವಸ್ಥಾನದಿಂದ ಅಂಬಾದೇವಿ ದೇವಸ್ಥಾನದವರೆಗೆ ಮೆರವಣಿಗೆ ಹಾಗೂ ಹಸಿರು ದಸರಾ ಕಾರ್ಯಕ್ರಮದಡಿಯಲ್ಲಿ ಕ್ಲಸ್ಟರ್ ವ್ಯಾಪ್ತಿಯಲ್ಲಿ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟಿಸುವರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಐ.ಟಿ. ಮತ್ತು ಬಿ.ಟಿ. ಇಲಾಖೆಯ ಸಚಿವರಾದ ಪ್ರಿಯಾಂಕ್ ಖರ್ಗೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶಿವರಾಜ ಎಸ್. ತಂಗಡಗಿ, ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ಸಣ್ಣ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ಯಮಗಳ ಇಲಾಖೆಯ ಸಚಿವರಾದ ಶರಣಬಸಪ್ಪ ದರ್ಶನಾಪುರ ಅವರು ಘನ ಉಪಸ್ಥಿತಿ ವಹಿಸುವರು.

ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ವಿಧಾನ ಪರಿಷತ್ ಶಾಸಕರು ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಬಸನಗೌಡ ಬಾದರ್ಲಿ, ಮಾಜಿ ಸಂಸದರು ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿಯ ಗೌರವಾಧ್ಯಕ್ಷರಾದ ಕೆ. ವಿರುಪಾಕ್ಷಪ್ಪ, ಮಾಜಿ ಸಚಿವರು ಹಾಗೂ ಸಿಂಧನೂರು ದಸರಾ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ವೆಂಕಟರಾವ್ ನಾಡಗೌಡ, ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ವೆಂಕನಗೌಡ (ಬಾಬುಗೌಡ) ಬಾದರ್ಲಿ, ಸೋಮಲಾಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ರೇಣುಕಮ್ಮ ಗಂ. ಹುಸೇನಪ್ಪ ಮಲ್ಲಾಪುರ, ಅಂಬಾಮಠ ಕಮಿಟಿಯ ಅಧ್ಯಕ್ಷರಾದ ರಂಗನಗೌಡ ಗೊರೇಬಾಳ ಅವರು ಭಾಗಿಯಾಗಲಿದ್ದಾರೆ.

ಅತಿಥಿಗಳಾಗಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ಅಪರ ಜಿಲ್ಲಾಧಿಕಾರಿ ಶಿವಾನಂದ ವೈ.ಭಜಂತ್ರಿ ಅವರು ಭಾಗಿಯಾಗಲಿದ್ದಾರೆ.ವಿವಿಧ ಸಾಂಸ್ಕೃತಿ ಕಾರ್ಯಕ್ರಮಗಳು: ಸರಿಗಮಪ ಖ್ಯಾತಿಯ ಜ್ಞಾನೇಶ, ಶಿವಾನಿ, ಭೂಮಿಕಾ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ, ಅರುಣೋದಯ ಸಾಂಸ್ಕೃತಿಕ ಕಲಾ ತಂಡ ಕೊತಬಾಳ ಇವರಿಂದ ಜೋಗತಿ ನೃತ್ಯ, ರಂಗಧಾರ ರೇಪರ್ಟರಿ (ರಿ) ಕೊಪ್ಪಳ ತಂಡದಿಂದ ಶಿಕ್ಷಣ, ಆರೋಗ್ಯ, ಕೃಷಿಗೆ ಸಂಬಂಧಿಸಿದಂತೆ ಜಾಗೃತಿ ರೂಪಕ ನಾಟಕಗಳು, ಗ್ರಾಮೀಣ ಕಲಾ ತಂಡಗಳಿಂದ ಕಲೆ–ಸಂಸ್ಕೃತಿ–ಜನಪದ ಕಾರ್ಯಕ್ರಮಗಳು ಹಾಗೂ ಕಾಲೇಜು ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ದೇವಿ ಮೂರ್ತಿ ಪ್ರತಿಷ್ಠಾಪನೆ: ಸೆಪ್ಟೆಂಬರ್ 23ರ ಸಂಜೆ 5 ಗಂಟೆಗೆ ಸಿಂಧನೂರಿನ ದಸರಾ ಉತ್ಸವ ವೇದಿಕೆಯ ಹತ್ತಿರ ಶ್ರೀ ದೇವಿ ಮೂರ್ತಿಯನ್ನು ವೇ.ಮೂ. ಅಮರಯ್ಯಸ್ವಾಮಿ ಹಿರೇಮಠ, ಅಲಬನೂರು ಇವರಿಂದ ಪ್ರತಿಷ್ಠಾಪನೆ ಮಾಡಲಾಗುತ್ತದೆ ಎಂದು ಸಿಂಧನೂರು ದಸರಾ ಉತ್ಸವ ಸಮಿತಿಯ ಪ್ರಕಟಣೆ ತಿಳಿಸಿದೆ.

# ಬೈಕ್‌ಗಳ ನಡುವೆ ಡಿಕ್ಕಿ: ಓರ್ವ ಸಾವು, ಇನ್ನೋರ್ವನಿಗೆ ಗಾಯ

**ಕಲಬುರಗಿ,ಸೆ.22–**ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಓರ್ವ ಮೃತಪಟ್ಟು, ಇನ್ನೋರ್ವ ಗಾಯಗೊಂಡಿರುವ ಘಟನೆ ನಗರ ಹೊರವಲಯದ ಕೇಂದ್ರ ಕಾರಾಗೃಹ ಹತ್ತಿರ ನಡೆದಿದೆ.




ಕೇಂದ್ರ ಕಾರಾಗೃಹ ಹತ್ತಿರವಿರುವ ಪೂರ್ಣಾನಂದ ಹೋಟೆಲ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ನಾಗನಹಳ್ಳಿ ಗ್ರಾಮದ ಶಿವರಾಜ ತಂದೆ ಮಲ್ಲಿಕಾರ್ಜುನ ಹೊಸಮನಿ ಎಂಬುವವರು ಮೃತಪಟ್ಟಿದ್ದು, ಸಂಗಮೇಶ ಎಂಬುವವರಿಗೆ ಗಾಯಗಳಾಗಿವೆ. ಇವರು ಪೂರ್ಣಾನಂದ ಹೋಟೆಲ್‌ನಿಂದ ಕಲಬುರಗಿ ಕಡೆಗೆ ಬೈಕ್ ಮೇಲೆ ಹೋಗುತ್ತಿದ್ದಾಗ ಕಲಬುರಗಿ ಕಡೆಯಿಂದ ಜೇವರ್ಗಿ ಕಡೆಗೆ ಹೋಗುತ್ತಿದ್ದ ಬೈಕ್ ಡಿಕ್ಕಿಯಾಗಿ ಗಾಯಗೊಂಡಿದ್ದರು. ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಶಿವರಾಜ ಹೊಸಮನಿ ಮೃತಪಟ್ಟಿದ್ದಾರೆ ಎಂದು ತಿಳಿದುಬಂದಿದೆ. ಈ ಸಂಬಂಧ ಸಂಚಾರ ಪೊಲೀಸ್ ಠಾಣೆ–1ರಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ಯುವ ಮಾರ್ಗ

ಮಂಗಳವಾರ : 23-09-2025

## ಹಿರಿಯ ನಾಗರೀಕರ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.22–** ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2025 ನಿಮಿತ್ತ ಹಿರಿಯ ನಾಗರೀಕರಿಗೆ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಗರದ ಜಿಲ್ಲಾ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಸೆ.20ರಂದು ನಡೆದವು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಹಿರಿಯ ನಾಗರೀಕರ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ನಡೆಯಿತು.

ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿಗಳು ಮತ್ತು ಇನ್ನೀತರರು ಇದ್ದರು.

## ಪಶ್ಚಿಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವ್ಯಕ್ತಿ ಕಾಣೆ: ಪತ್ತೆಗೆ ಮನವಿ

ಯುವ ಮಾರ್ಗ ಸುದ್ದಿ



**ರಾಯಚೂರು,ಸೆ.22–** ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ಅಸ್ಕಿಹಾಳ ನಿವಾಸಿ ಆಂಜನೇಯ (62) ಅವರು ಸೆಪ್ಟೆಂಬರ್ 14ರ ಮಧ್ಯಾಹ್ನ 12.30ಕ್ಕೆ ಮನೆಯಲ್ಲಿ ಊಟ ಮಾಡಿ ಹೊರಗೆ ಹೋಗಿದ್ದು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಠಾಣಾ ಅಪರಾಧ ಸಂಖ್ಯೆ: 128/2025 ಕಲಂ ಮನುಷ್ಯ ಕಾಣೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ತಮ್ಮ ತಂದೆಯ ಮೊಬೈಲ್ ಸಂಖ್ಯೆ: 9008104144ಗೆ ಅಂದು ಸಂಜೆ ಕರೆ ಮಾಡಿ ವಿಚಾರಿಸಿದಾಗ ಅವರು 'ಬರುತ್ತೇನೆ ಬಿಡು' ಎಂದು ಸಿಟ್ಟು ಮಾಡಿದರು. ನಂತರ ಸಂಜೆ 4 ಗಂಟೆಗೆ ಕರೆ ಮಾಡಿದಾಗ ಅವರ ಮೊಬೈಲ್ ಸ್ವಿಚ್ಡ್ ಆಫ್ ಬಂದಿದೆ. ಕಾಣೆಯಾದ ತಮ್ಮ ತಂದೆಯ ಬಗ್ಗೆ ಸಂಬಂಧಿಕರ ಮನೆಯಲ್ಲಿ ಹುಡುಕಾಡಿದಾಗ ಪತ್ತೆಯಾಗಿರುವುದಿಲ್ಲ ಎಂದು ಕಾಣೆಯಾದ ಆಂಜನೇಯ ಅವರ ಪುತ್ರ, ನಾಗರಕಟ್ಟೆಯ ಕೃಷ್ಣಮೆಡೌಸ್‌ನಲ್ಲಿ ವಾಚಮನ್ ಆಗಿ ಕೆಲಸ ಮಾಡುವ ರಮೇಶ ಅವರು ದೂರು ದಾಖಲಿಸಿದ್ದಾರೆ.

ಕಾಣೆಯಾದ ವ್ಯಕ್ತಿಯ ಚಹರೆ: ಕಾಣೆಯಾದ ಆಂಜನೇಯ ಅವರು 5.6 ಎತ್ತರ, ತೆಳ್ಳನೆಯ ಮೈಕಟ್ಟು, ಗೋಧಿ ಮೈಬಣ್ಣ, ಉದ್ದನೆಯ ಮುಖ, ತಲೆಯಲ್ಲಿ ಕಪ್ಪು ಕೂದಲು ಹೊಂದಿದ್ದು, ಬಿಳಿ ಪಂಚೆ, ಬಿಳಿ ಜುಬ್ಬ ಹಾಗೂ ಹಸಿರು ಟಾವೆಲ್ ಬಟ್ಟೆಗಳನ್ನು ಧರಿಸಿರುತ್ತಾರೆ. ಕನ್ನಡ, ತೆಲುಗು, ಇಂಗ್ಲೀಷ್ ಹಾಗೂ ಹಿಂದಿ ಭಾಷೆ ಮಾತನಾಡುತ್ತಾರೆ.

ಈ ವ್ಯಕ್ತಿಯ ಬಗ್ಗೆ ಸುಳಿವು ಕಂಡುಬಂದಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532-232570, ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803847, ಪಶ್ಚಿಮ ವೃತ್ತ ಸಿ.ಪಿ.ಐ ಮೊಬೈಲ್ ಸಂಖ್ಯೆ: 9480803831, ಜಿಲ್ಲಾ ನಿಸ್ತಂತು ಘಟಕ ರಾಯಚೂರು ದೂರವಾಣಿ ಸಂಖ್ಯೆ: 08532-235635, 9480803800ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು

**ಕಲಬುರಗಿ,ಸೆ.22–**ಕಿರಾಣಿ ಅಂಗಡಿ ಬೀಗ ಮುರಿದು 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿರುವ ಘಟನೆ ಭವಾನಿ ನಗರದಲ್ಲಿ ನಡೆದಿದೆ.ಚಂದ್ರಕಾಂತ ಗೋಳಾ ಎಂಬುವವರ ಕಿರಾಣಿ ಅಂಗಡಿ ಬೀಗ ಮುರಿದು ಕಳ್ಳರು 70 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಲಾಕೆಟ್, 70 ಸಾವಿರ ರೂ.ಮೌಲ್ಯದ 10 ಗ್ರಾಂ.ಬಂಗಾರದ ಸುತ್ತುಂಗುರ, 70 ಸಾವಿರ ರೂ.ಮೌಲ್ಯದ ತಲಾ 5 ಗ್ರಾಂ.ಬಂಗಾರದ ಎರಡು ಸುತ್ತುಂಗುರ ಮತ್ತು 12 ಸಾವಿರ ರೂ.ನಗದು ಸೇರಿ 2.22 ಲಕ್ಷ ರೂ.ಮೌಲ್ಯದ ನಗನಾಣ್ಯ ದೋಚಿಕೊಂಡು ಹೋಗಿದ್ದಾರೆ. ಈ ಬಗ್ಗೆ ಚೌಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

## ನಿರ್ಮಾಣ ಹಂತದಲ್ಲಿರುವ ರಾಯಚೂರು ವಿಮಾನ ನಿಲ್ದಾಣ ಕಾಮಗಾರಿ ಪರಿಶೀಲಿಸಿದ ಸಚಿವರಾದ ಎನ್.ಎಸ್.ಬೋಸರಾಜು

ಯುವ ಮಾರ್ಗ ಸುದ್ದಿ

**ರಾಯಚೂರ,ಸೆ.22–** ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್ ಎಸ್ ಬೋಸರಾಜು ಅವರು ಸೆ.20ರಂದು ರಾಯಚೂರ ಸಿಟಿ ಹೊರವಲಯದ ಯರಮರಸ್ ಪ್ರದೇಶದಲ್ಲಿ ಸಂಚರಿಸಿ ನಿರ್ಮಾಣ ಹಂತದಲ್ಲಿರುವ ರಾಯಚೂರ ವಿಮಾನ ನಿಲ್ದಾಣದ ಕಾಮಗಾರಿ ಪರಿಶೀಲಿಸಿದರು.

ನಿರ್ಮಾಣ ಹಂತದಲ್ಲಿರುವ ಫ್ಲೈಟ್ ಟರ್ಮಿನಲ್ ಕಟ್ಟಡ, ಎಲೆಕ್ಟ್ರಿಕಲ್ ಸೇಫ್ಟಿ ಕಟ್ಟಡ, ರನ್ ವೆ ಕಾಮಗಾರಿ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಸಚಿವರು, ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸರ್ಕಾರಗಳಿಂದ ಯಾವುದೇ ರೀತಿಯ ಹಣಕಾಸಿನ ಕೊರತೆಯಿಲ್ಲ. ಜಿಲ್ಲಾಡಳಿತವು ಈ ಬಗ್ಗೆ ವಿಶೇಷ ಕಾಳಹಿ ವಹಿಸಿದ್ದು, ಜಿಲ್ಲಾಧಿಕಾರಿಗಳು ನಿರಂತರವಾಗಿ ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆಯುತ್ತಿದ್ದಾರೆ. ನಿಲ್ದಾಣವನ್ನು ಉತ್ತಮವಾಗಿ ಸಿದ್ದಪಡಿಸಲು ಅಧಿಕಾರಿಗಳು ಸನ್ನದ್ಧರಾಗಿದ್ದಾರೆ ಎಂದು ತಿಳಿಸಿದರು.

ನಿಲ್ದಾಣದ ಕಾಂಪೌಂಡ್ ನಿರ್ಮಾಣ ಕಾರ್ಯ ಈಗಾಗಲೆ ಶೇ.90ರಷ್ಟು ಪೂರ್ಣಗೊಂಡಿದೆ. ಈಗಾಗಲೇ ಇಲ್ಲಿನ ಮಣ್ಣಿನ ಪರೀಕ್ಷೆ ನಡೆಸಿದ್ದು, ಮುಖ್ಯವಾಗಿ ಆಗಬೇಕಾದ ರನ್ ವೇ ಮತ್ತು ಟಾವರ್ ನಿರ್ಮಾಣ ಕಾರ್ಯ ಪ್ರಗತಿ ಹಂತದಲ್ಲಿದೆ. ಬೇರೆಡೆ 5 ಎಕರೆ ಜಾಗ ಗುರುತಿಸಿ ಸಂತ್ರಸ್ತ ಕುಟುಂಬದವರಿಗೆ ಮನೆಕಟ್ಟಲು ಅನುಕೂಲ ಕಲ್ಪಿಸಲಾಗಿದೆ. ಅಗತ್ಯವಿರುವ ಹೆಚ್ಚುವರಿ ಭೂಸ್ವಾಧೀನಕ್ಕು ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ರಾಯಚೂರ ಭಾಗದಲ್ಲಿ ವೈಟಿಪಿಎಸ್, ಆರ್ ಟಿಪಿಎಸ್, ಹಟ್ಟಿ ಚಿನ್ನದ ಗಣಿ, ಐಐಐಟಿ, ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾನಿಲಯ,



ಆದಕವಿ ಮಹರ್ಷಿ ವಾಲ್ಮೀಕಿ ವಿಶ್ವ ವಿದ್ಯಾಲಯ, ಪ್ರಸಿದ್ಧ ಅಧ್ಯಾತ್ಮ ಕೇಂದ್ರ ಮಂತ್ರಾಲಯ ಮತ್ತು ನೂರಾರು ಖಾಸಗಿ ಕಂಪನಿಗಳು ಇರುವುದರಿಂದ ರಾಯಚೂರಿನಿಂದ ಬೇರೆಡೆ ಸಂಚರಿಸಲು ವಿಮಾನ ನಿಲ್ದಾಣದ ಅಗತ್ಯವಿದೆ.

ಜಿಂದಾಲ್, ಕರ್ನೂಲ್ ಪ್ರದೇಶದಲ್ಲಿರುವಷ್ಟೇ ವಿಮಾನಯಾನದ ಅಗತ್ಯತೆ ಇಲ್ಲಿದೆ. ವಿಜಯಪುರ ವಿಮಾನ ನಿಲ್ದಾಣ, ಶಿವಮೊಗ್ಗ ವಿಮಾನ ನಿಲ್ದಾಣ ನಿರ್ಮಾಣ ಕಾರ್ಯ ಗಮನಿಸಿದ್ದು, ಅಲ್ಲಿನ ಕಾಮಗಾರಿಗಳಿಗೆ ಹೋಲಿಸಿದರೆ ರಾಯಚೂರ ವಿಮಾನ ನಿಲಾ೯ಣ ನಿರ್ಮಾಣ ಕಾರ್ಯ ವೇಗವಾಗಿ ನಡೆಯುತ್ತಿದೆ. 2026ರ ದಸರಾ ಹೊತ್ತಿಗೆ ನಿರ್ಮಾಣ ಕಾರ್ಯ ಸಂಪೂರ್ಣವಾಗುವ ರೀತಿ ಸಿದ್ಧತಾ ಕಾರ್ಯಗಳು ನಡೆದಿವೆ ಎಂದು ಸಚಿವರು ತಿಳಿಸಿದರು.

ಈ ವೇಳೆ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಸಹಾಯಕ ಆಯುಕ್ತರಾದ ಗಜಾನನ ಬಾಳೆ, ಲೋಕೋಪಯೋಗಿ ಇಲಾಖೆಯ ಎಂಜಿನಿಯರು ಮತ್ತು ಇನ್ನೀತರರು ಇದ್ದರು.

## ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ, ಸಂಸ್ಕರಣ ಸಹಕಾರ ಸಂಘದ 70ನೇ ವಾರ್ಷಿಕ ಮಹಾಸಭೆ ಯಶಸ್ವಿ



ಯುವ ಮಾರ್ಗ ಸುದ್ದಿ

**ರಾಯಚೂರು,ಸೆ.22–** ಇಲ್ಲಿನ ರಾಯಚೂರು ಒಕ್ಕಲುತನ ಹುಟ್ಟುವಳಿ ಮಾರಾಟ ಹಾಗೂ ಸಂಸ್ಕರಣ ಸಹಕಾರ ಸಂಘ ನಿಯಮಿತದ ಸಂಘದ 70ನೇ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷರಾದ ಜಯವಂತರಾವ್ ಪತಂಗೆ ಅವರ ಅಧ್ಯಕ್ಷತೆಯಲ್ಲಿ ಸಂಘದ ಕಚೇರಿ ಸಭಾಂಗಣದಲ್ಲಿ ಸೆಪ್ಟೆಂಬರ್ 19ರಂದು ಯಶಸ್ವಿಯಾಗಿ ನಡೆಯಿತು.

ಈ ವೇಳೆ ಜಯವಂತರಾವ್ ಪತಂಗೆ ಅವರು ಮಾತನಾಡಿ, ಸಂಘದಲ್ಲಿ ರೈತರಿಗಾಗಿ ರಸಗೊಬ್ಬರ, ಬೆಂಬಲ ಬೆಲೆಯಲ್ಲಿ ಜೋಳ, ತೊಗರಿ ಖರೀದಿ ಹಾಗೂ ಕೃಷಿ ಹುಟ್ಟುವಳಿಗಳ ದಾಸ್ತನು ಸಂಗ್ರಾಹಣೆಗಾಗಿ ಗೋದಾಮು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದರು. ರೈತರು ತಮ್ಮ ಕೃಷಿ ಉತ್ಪನ್ನಗಳನ್ನು ಉತ್ತಮವಾಗಿ ಮಾರಾಟ ಮಾಡುತ್ತಿದ್ದಾರೆ. ಇಡೀ ರಾಜ್ಯದಲ್ಲಿ ಯಾವ ತಾಲೂಕು ಪತ್ತಿನ ಸಹಕಾರ ಸಂಘಗಳು ಮಾಡದ ಸಾಧನೆಯನ್ನು ರಾಯಚೂರಿನ ಸಂಘವು ಮಾಡಿದೆ ಎಂದು ಅವರು ತಿಳಿಸಿದರು.

ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪೆಟ್ರೋಲ್ ಬಂಕನ್ನು ನಿರ್ಮಾಣ ಮಾಡಿ ಅನೇಕ ವ್ಯಾಪಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹ ರೈತರು ಉಪಯೋಗಿಸಿಕೊಳ್ಳಬೇಕೆಂದು ತಿಳಿಸಿದರು.

ಈ ವೇಳೆ, ಕೃಷಿ ಉತ್ಪನ್ನಗಳ ವ್ಯಾಪಾರ ಚಟುವಟಿಕೆಯಲ್ಲಿ ಪ್ರಥಮ ಸ್ಥಾನ ಪಡೆದ ಜಯಪ್ರಕಾಶ್ ರೆಡ್ಡಿ ಹೆಗ್ಗಸನಹಳ್ಳಿ, ದ್ವಿತೀಯ ಸ್ಥಾನ ಪಡೆದ ಮಲ್ಲಿಕಾರ್ಜುನ ಗೌಡ ಮಂಚಲಾಪೂರ, ತೃತೀಯ ಸ್ಥಾನ ಪಡೆದ ಶ್ರೀಮತಿ ಶಿವಲಿಂಗಮ್ಮ ಸಾ.ವತ್ತೂರು ಹಾಗೂ ಸಕಾಲಕ್ಕೆ ಸಂಘಕ್ಕೆ ರಸಗೊಬ್ಬರ ಪೂರೈಕೆಗೆ ಸಹಕರಿಸಿದ ಸಚೀನ್ ಇಫ್ಕೋ, ಶಶಿಕುಮಾರ್ ಕ್ರಿಫ್ಕೋ, ಸುನೀಲ್ ಅವರಿಗೆ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಇದೇ ಸಚಿದರ್ಭದಲ್ಲಿ ಉಪಾಧ್ಯಕ್ಷರಾದ ಶಶಿಧರ ಪಾಟೀಲ್, ನಿರ್ದೇಶಕರಾದ ಮಲ್ಲನಗೌಡ ಪಾಟೀಲ್, ಕೆ.ಶರಣಪ್ಪ ಕಲ್ಕಲಾ, ಶರಬಣ್ಣ ಗೌಡ ಶ್ರೀನಿವಾಸಪೂರ, ಮಲ್ಲಪ್ಪ ಗೌಡ, ಶಂಕರ ರಡ್ಡಿ, ಉಮೇಶ ಗೌಡ, ಎನ್.ಭೀಮರೆಡ್ಡಿ, ಲೆಕ್ಕಪರಿಶೋಧಕರಾಧ ವೆಂಕಟ ಕೃಷ್ಣನ್ ಇದ್ದರು.

ವಾರ್ಷಿಕ ಮಹಾ ಸಭೆಯ ಗೊತ್ತುವಳಿಗಳನ್ನು ಲೇಕಪಾಲರಾದ ನರಸಿಂಹಪ್ಪ ಮಂಡಿಸಿದರು. ನಿಯೋಜಿತ ಚಟುವಟಿಕೆಗಳ ಮಂಡನೆಯುನ್ನು ನರಸಿಂಹಪ್ಪ ಮಾಡಿದರು. ಪ್ರಧಾನ ವ್ಯವಸ್ಥಾಪಕರಾದ ಬಂದಯ್ಯ ಅವರು ನಿರೂಪಿಸಿದರು. ಶೇಖಹುಸೇಸ್ ಅವರು ವಂದಿಸಿದರು.

## ಜಾತಿ ಸಮೀಕ್ಷೆ : ವೀರಶೈವ ಲಿಂಗಾಯತ ಧರ್ಮ ಎಂದು ಬರೆಸಿ : ಬಯ್ಯಾಪೂರ

ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಸೆ.22–** ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಸಮೀಕ್ಷೆಯಲ್ಲಿ ಧರ್ಮ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದೇ ನಮೂದಿಸಿ, ಜಾತಿ ಕಲಂನಲ್ಲಿ ಲಿಂಗಾಯತ ಅಥವಾ ವೀರಶೈವ ಎಂದು ಬರೆಸಿ, ಉಪಜಾತಿ ಕಾಲಂನಲ್ಲಿ ರಿಜರ್ವೆಶನ್ ಆಧಾರದ ಜಾತಿಗಳನ್ನು ಬರೆಸಬೇಕು ಎಂದು ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಸಮಾಜದ ಒಳಪಂಗಡಗಳನ್ನು ಒಗ್ಗೂಡಿಸಲೆಂದೇ ಅಖಿಲ ಭಾರತ ವೀರಶೈವ ಮಹಾಸಭಾವನ್ನು ರಚನೆ ಮಾಡಲಾಗಿದೆ. ಲಿಂಗಾಯತ ವೀರಶೈವ ಧರ್ಮ ಸ್ಥಾಪನೆಗೆ ಈಗಾಗಲೇ ರಾಜ್ಯ ಸರಕಾರಕ್ಕೆ ಮನವಿ ಮಾಡಿ ಕೇಂದ್ರಕ್ಕೆ ಎರಡು ಬಾರಿ ಪ್ರಸ್ತಾವನೆ ಸಲ್ಲಿಸಿದ್ದೇವೆ. ಎರಡೂ ಬಾರಿ ಪ್ರಸ್ತಾವನೆ ರಿಜೆಕ್ಟ್ ಆಗಿದೆ. ಮುಂದಿನ ದಿನಗಳಲ್ಲಿ ಲಿಂಗಾಯತ ವೀರಶೈವ ಧರ್ಮ ಸಿಕ್ಕಾಗ ಹೆಚ್ಚಿನ ಸವಲತ್ತುಗಳು ಸಿಗಲಿವೆ. ಇದಕ್ಕಾಗಿ ನಿರಂತರವಾಗಿ ನಮ್ಮ ಪ್ರಯತ್ನ, ಹೋರಾಟ ಜಾರಿಯಲ್ಲಿರುತ್ತದೆ ಎಂದರು.

ಇದು ಕೇವಲ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಸಮೀಕ್ಷೆಯಾಗಿದೆ.




ಜಾತಿ ಕಾಲಂನಲ್ಲಿ ರಿಜರ್ವಶನ್ ಇರುವ ನಿಮ್ಮ ನಿಮ್ಮ ಜಾತಿಗಳನ್ನೇ ಬರೆಸಿ. ಆದರೆ, ಧರ್ಮ ಕಾಲಂನಲ್ಲಿ ಹಿಂದೂ ಎಂದು ಬರೆಸಬೇಡಿ. ವೀರಶೈವ ಲಿಂಗಾಯತ ಎಂದು ಮಾತ್ರ ಬರೆಸಿ. ಇದಕ್ಕೂ ರಿಜರ್ವೇಶನ್‌ಗೂ ಸಂಬಂಧವಿಲ್ಲ. ಸರಕಾರದ ಸವಲತ್ತುಗಳನ್ನು ಪಡೆಯಲು ರಿಜರ್ವೇಶನ್‌ಗಳಿವೆ. ಸಮೀಕ್ಷೆ ಸಮಯದಲ್ಲಿ ಮಾತ್ರ ಎಚ್ಚರಿಕೆಯಿಂದ ನಮೂದಿಸಿ ಎಂದು ಮಹಾಸಭಾದ ತಾಲೂಕು ಅಧ್ಯಕ್ಷ ಶರಣಪ್ಪ ಮೇಟಿ ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಪ್ರಭುಸ್ವಾಮಿ ಅತ್ತೂರು, ಸೋಮಶೇಖರ ಐದನಾಳ, ನಿಂಬಣ್ಣ ಕುಂಬಾರ, ಚಿದಾನಂದಪ್ಪ ಸೇರಿ ಇತರರು ಇದ್ದರು.

## ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಗೆ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

**ರಾಯಚೂರು,ಸೆ.22–** ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ 6,7,8,9 ಮತ್ತು 11ನೇ ತರಗತಿಯ ವಿದ್ಯಾರ್ಥಿನಿಯರಿಗೆ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಗೆ ನೀಡಲು ಅರ್ಹ ಮಹಿಳಾ ತರಬೇತಿದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಥಿನಿಯರಿಗೆ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ ವಾರದಲ್ಲಿ ಎರಡು ದಿನಗಳಂತೆ ಆರು ತಿಂಗಳ ಅವಧಿಗೆ ನೀಡಲಾಗುತ್ತದೆ. ಪ್ರತಿ ಬ್ಯಾಚ್‌ಗೆ 75–100 ರಂತೆ 3 ಬ್ಯಾಚ್‌ಗಳಲ್ಲಿ 225–300 ವಿದ್ಯಾರ್ಥಿನಿಯರಿಗೆ ಪ್ರಾಥಮಿಕ ಹಾಗೂ ಉನ್ನತೀಕರಣ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿ ನೀಡಲು ಅನುಮೋದನೆ ನೀಡಿ ಆದೇಶಿಸಲಾಗಿದೆ.

ತರಬೇತಿ ಕಾರ್ಯಕ್ರಮ ನಿಗದಿತ 48 ಗಂಟೆಗಳ (6 ತಿಂಗಳ) ಅವಧಿಗಳಲ್ಲಿ ವಾರದಲ್ಲಿ ಎರಡು ದಿನಗಳಂತೆ ದಿನಕ್ಕೆ 60 ನಿಮಿಷಗಳಲ್ಲಿ ನುರಿತ ಕರಾಟೆ ತರಬೇತಿದಾರರಿಂದ ಕರಾಟೆ–ಸ್ವಯಂ ರಕ್ಷಣಾ ಕೌಶಲ್ಯ ತರಬೇತಿಯನ್ನು ನಿಯಮಾನುಸಾರ ನೀಡಲಾಗುತ್ತಿದ್ದು, ಜಿಲ್ಲೆಯ ಸ್ವಯಂ ರಕ್ಷಣಾ ಕೌಶಲ್ಯಗಳ ಸಂಸ್ಥೆಗಳು, ನುರಿತ ಮತ್ತು ಅರ್ಹ ಅಭ್ಯರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಯಚೂರು ಇವರ ಕಚೇರಿಗೆ ಸೆಪ್ಟೆಂಬರ್ 29ರೊಳಗಾಗಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಕಚೇರಿಯ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ ಎಂದು ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎನ್.ಎಮ್.ಎಮ್.ಎಸ್ ಪರೀಕ್ಷೆಗೆ ಅರ್ಜಿ ಪ್ರಾರಂಭ

**ದೇವದುರ್ಗ,ಸೆ.22–** ತಾಲೂಕಿನ 8ನೇ ತರಗತಿ ಹೊಂದಿರುವ ಎಲ್ಲಾ ಸರಕಾರಿ ಉನ್ನತೀಕರಿಸಿದ/ಪ್ರೌಢ ಶಾಲೆಗಳ/ಅನುದಾನಿತ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು , 2025–26ನೇ ಸಾಲಿನಲ್ಲಿ ಓಒಒಖ ಪರೀಕ್ಷೆಗೆ ಅರ್ಹ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ನೊಂದಣಿ ಪ್ರಕ್ರಿಯೆ ಆರಂಭವಾಗಿದೆ. ಒಮ್ಮೆ ಓಒಒಖ ಪರೀಕ್ಷೆಯ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾದರೆ, 9ನೇ ತರಗತಿಯಿಂದ ಸತತ ನಾಲ್ಕು ವರ್ಷಗಳ ವರೆಗೆ ಮಾಸಿಕ ರೂ.1000/– ರಂತೆ ನಾಲ್ಕು ವರ್ಷಕ್ಕೆ ರೂ.48,000/– ರೂಪಾಯಿಗಳ ವಿದ್ಯಾರ್ಥಿ ವೇತನ ದೊರಕಲಿದೆ. ಪಾಲಕರ ವಾರ್ಷಿಕ ಆದಾಯ ರೂ.3.50ಲಕ್ಷಕ್ಕಿಂತ ಮೀರಿರ ಬಾರದು.ವಸತಿ ಶಾಲೆಗಳಲ್ಲಿ ವಾಸವಿರುವ ವಿದ್ಯಾರ್ಥಿಗಳು ಇದಕ್ಕೆ ಅರ್ಹರಾಗಿರುವುದಿಲ್ಲ.

ಪ್ರಸಕ್ತ ಸಾಲಿನಲ್ಲಿ 8ನೇ ತರಗತಿ ಹೊಂದಿರುವ ಶಾಲೆ ಮುಖ್ಯ ಗುರುಗಳು ಗರಿಷ್ಠ ಪ್ರಮಾಣದಲ್ಲಿ ನೊಂದಣಿ ಮಾಡಲು ಪ್ರಥಮಾಧ್ಯತೆ ನೀಡಲು ಸೂಚಿಸಿದೆ.

ಆನ್ ಲೈನ್ ಅರ್ಜಿ ಪ್ರಾರಂಭ ದಿನಾಂಕ : 10–09–2025
ಆನ್ ಲೈನ್ ಅರ್ಜಿ ಕೊನೆಯ ದಿನಾಂಕ : 15–10–2025
ಪರೀಕ್ಷೆ ನಡೆಯುವ ದಿನಾಂಕ: 07–12–2025 ರಂದು ಎಂದು ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು

ಕ್ಷೇತ್ರ ಶಿಕ್ಷಣಾಧಿಕಾರಿಗಳು ದೇವದುರ್ಗ ಅವರು ಪತ್ರಿಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.22ರಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ

**ರಾಯಚೂರು,ಸೆ.22–** ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಸೆ.22ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 02 ಗಂಟೆವರೆಗೆ ನೇರ ಸಂದರ್ಶನ ಆಯೋಜಿಸಲಾಗಿದೆ. ಈ ವೇಳೆ ಮೂರು ಕಂಪನಿಗಳು ಭಾಗವಹಿಸಿ ತಮ್ಮಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅರ್ಹತೆಗಳು: ಎಸ್.ಎಸ್.ಎಲ್.ಸಿಮ, ಪಿ.ಯು.ಸಿ ಹಾಗೂ ಎಲ್ಲಾ ಪದವೀಧರ ಆಸಕ್ತ 18 ರಿಂದ 30 ವರ್ಷಗಳ ವರೆಗಿನ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸಬಹುದಾಗಿದೆ. ವಿದ್ಯಾರ್ಹತೆಯ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡೆಟಾ, ಆಧಾರ್ ಕಾರ್ಡ್ ಪ್ರತಿ, ಭಾವಚಿತ್ರಗನ್ನು ಸಲ್ಲಿಸಬೇಕು. ನೇರ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ, ಬದಲಾಗಿ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಬಾಲಾಜಿ ಕಾಂಪ್ಲೆಕ್ಸ್, ನೆಲ ಮಹಡಿ, ಗೂಡ್ ಶೆಡ್ ರಸ್ತೆ, ಸ್ಟೇಷನ್ ಏರಿಯಾ, ರಾಯಚೂರು ಹಾಗೂ ದೂರವಾಣಿ ಸಂಖ್ಯೆ 08532–231684, 9901028565, ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಬರೆಯಿಲು ಮುಖ್ಯ ಕಾರ್ಯದರ್ಶಿಗಳ ಸೂಚನೆ

**ರಾಯಚೂರು,ಸೆ.22–**ರಾಜ್ಯದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ / ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ಬರೆಯಿಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ.ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆಯ ಆದ್ಯತೆಯನ್ನು ಸಾಧಿಸುವ ಒಂದು ಮಾರ್ಗವಾಗಿದೆ. ಸಂಕಷ್ಟದಲ್ಲಿನ ಹಾಗೂ ಸವಾಲಿನಲ್ಲಿರುವ ಮಕ್ಕಳ ಹಿತರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟ ಸ್ಥಿತಿಯಲ್ಲಿ ಮಾಹಿತಿ ಹಂಚಿಕೊಳ್ಳಲು ಹಾಗೂ ಪುನರ್ ವಸತಿ ಸೇವೆ ಕಲ್ಪಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರ ವಹಿಸುತ್ತದೆ.ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕತೆ ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ.ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಕಡ್ಡಾಯವಾಗಿ ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ. ಕೆಲವು ಇಲಾಖೆಗಳಲ್ಲಿ ಈ ಬಗ್ಗೆ ನಿರ್ದೇಶನವಿಲ್ಲ ಎಂಬ ಗೊಂದಲಗಳಿಂದ ಶಾಶ್ವತ ಫಲಕಗಳಲ್ಲಿ ಪ್ರದರ್ಶಿಸದೇ ಇರುವುದು ತಿಳಿದು ಬಂದಿದ್ದು, ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಶಾಶ್ವತ ಫಲಕದಲ್ಲಿ ಪ್ರದರ್ಶಿಸದೆ ಇರುವ ಇಲಾಖೆಗಳು ಯಾವುದೇ ಗೊಂದಲಗಳಿಗೆ ಆಸ್ಪದ ಕೊಡದೇ ತಕ್ಷಣ ಕ್ರಮಕೈಗೊಂಡು ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ತಮ್ಮ ಇಲಾಖೆಯ ಶಾಶ್ವತ ಫಲಕದಲ್ಲಿ ಪ್ರದರ್ಶಿಸುವಂತೆ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H